ನೀಡಲಾಗುವುದೆಂದು ತೀರ್ಮಾನ ತೆಗೆದುಕೊಳ್ಳಲಾಗಿರುತ್ತದೆ. ಇದರ ಜೊತೆಗೆ 11ನೇ ಫೆಬ್ರವರಿ, 2004ರಂದು ಹಾಗೂ ದಿನಾಂಕ 12ನೇ ಫೆಬ್ರವರಿ, 2004 ರಂದು ಕೆಳಕಂಡ ಕಾರ್ಯಕ್ರಮಗಳನ್ನು ನಡೆಸಲಾಗುವುದು :

ದಿನಾಂಕ 11ನೇ ಫೆಬ್ರವರಿ, 2004

1. ಸಾಯಂಕಾಲ 6 ಗಂಟೆಗೆ ಮಾನ್ಯ ಸಭಾಪತಿಯವರು ಹಾಗೂ ಮಾನ್ಯ ಸಭಾಧ್ಯಕ್ಷರಿಂದ ಚಹಾ ಕೂಟ
2. ಸಾಯಂಕಾಲ 6.30 ಗಂಟೆಗೆ ಶಾಸಕರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು
3. ಸಾಯಂಕಾಲ 7.00 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕಾರ್ಯಕ್ರಮಗಳು.
4. ರಾತ್ರಿ 8.30 ಗಂಟೆಗೆ ಮಾನ್ಯ ಮುಖ್ಯಮಂತ್ರಿಯವರಿಂದ ಭೋಜನ ಕೂಟ.

ದಿನಾಂಕ 12ನೇ ಫೆಬ್ರವರಿ, 2004

1. ಬೆಳಿಗ್ಗೆ 9.00ಗಂಟೆಗೆ ವಿಧಾನ ಸೌಧದ ಪೂರ್ವ ದ್ವಾರದ ಮುಂಭಾಗದಲ್ಲಿ ಶಾಸಕರ ಗ್ರೂಪ್ ಭಾವಚಿತ್ರಗಳನ್ನು ತೆಗೆಯುವ ಕಾರ್ಯಕ್ರಮ.

ದಯವಿಟ್ಟು ಈ ಕಾರ್ಯಕ್ರಮಗಳಿಗೆ ಎಲ್ಲರೂ ಬರಬೇಕೆಂದು ವಿನಂತಿ.

ಶ್ರೀ ಜಿ.ಎಸ್. ಪಾಟೀಲ್ (ಸಾಸನೂರು) : ಮಾನ್ಯ ಅಧ್ಯಕ್ಷರೆ, ನನ್ನದೊಂದು ಬಿಲ್ ಇದೆ. ಐದೇ ನಿಮಿಷಗಳಲ್ಲಿ ಹೇಳಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು : ನಾಳೆ ಬೆಳಿಗ್ಗೆ ಮೊದಲಿಗೆ ನಿಮ್ಮ ಬಿಲ್ ಅನ್ನೆ ತೆಗೆದುಕೊಳ್ಳೋಣ. ವಿರೋಧ ಪಕ್ಷದವರು ಏನನ್ನು ಮಾಡಿದರೆ ಎರಡು ನಿಮಿಷಗಳಲ್ಲಿ ಆಗುತ್ತದೆ. ಅವರು ಚರ್ಚೆ ಆಗಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದು ಬಹಳ ಗಂಭೀರವಾದ ಬಿಲ್ ಇದೆ. ಅದರ ಹಿನ್ನಲೆ ಬಹಳ ಇದೆ. ಅದರ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದ್ದರಿಂದ ನಾಳೆ ಬೆಳಿಗ್ಗೆ ಮೊದಲಿಗೆ ಅದನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು : ಅವರು ಒಪ್ಪಿದ್ದಾರೆ ಬಿಡಿ. ನನಗೆ ಜವಾಬ್ದಾರಿ ಏನಿಸಿ, ನಾನು ಮಾಡಿಕೊಳ್ಳುತ್ತೇನೆ.

ಶ್ರೀ ಸುರೇಶ್ ಕುಮಾರ್ : ಜವಾಬ್ದಾರಿ ಅಂದರೆ, ಚರ್ಚೆಗೆ ಅವಕಾಶ ಮಾಡಿಕೊಡುವುದು, ಬಿಲ್ ಪಾಸ್ ಮಾಡಿಸಿಕೊಡುವುದು ಅಂದರೆ ಹೇಗೆ ?

ಅಧ್ಯಕ್ಷರು : ನಿಮ್ಮ ಮೇಲೆ ನನಗೆ ಅಷ್ಟು ನಂಬಿಕೆ ಇದೆ. ನಂಬಿಕೆ ಇರುವುದರಿಂದ ಹೇಳುತ್ತಿದ್ದೇನೆ ಅಷ್ಟೆ.

7. ವಿತ್ತೀಯ ಕಾರ್ಯಕಲಾಪಗಳು:-

2004-2005ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

†**ಶ್ರೀ ಎ. ರಾಮದಾಸ್: (ಕೃಷ್ಣರಾಜ)** : ಮಾನ್ಯ ಅಧ್ಯಕ್ಷರೆ, ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು 5ನೇ ಬಜೆಟ್‌ನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಅದರಲ್ಲೂ ಪೂರ್ಣವಾದಂಥ ಬಜೆಟ್‌ನ್ನು ಕೊಟ್ಟಿಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಐದು ವರ್ಷಗಳ ಕಾಲದ ನಂತರದಲ್ಲಿ ಚುನಾವಣೆಗಳು ನಡೆಯಬಹುದು, ಆ ದೃಷ್ಟಿಯಿಂದ ಈ ವರ್ಷವೂ ಕೂಡ ಪೂರ್ಣವಾದಂಥ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ ಎನ್ನುವಂಥ ಭಾವನೆಗಳು ನನ್ನಿಂದ ಹಿಡಿದು

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಪುರಸ್ಕರಿಸಿಲ್ಲವೆಂದು ಸೂಚಿಸುತ್ತದೆ)

ಎಲ್ಲರ ಮನಸ್ಸಿನಲ್ಲೂ ಇತ್ತು. ಆದರೆ ಪೂರ್ಣವಾದಂಥ ಬಜೆಟ್‌ನ್ನು ಮಂಡನೆ ಮಾಡಿದ ನಂತರದಲ್ಲಿ ಈಗತಾನೇ ತಾವು ಆ ಸ್ಥಾನದಿಂದ ಹೇಳಿದಿರಿ, ನಾಳೆ ಸಾಯಂಕಾಲ ಔತಣಕೂಟ, ನಾಡಿದ್ದು ಬೆಳಿಗ್ಗೆ ಎಲ್ಲರಿಗೂ ಫೋಟೋ ಸೆಷನ್ ಎಂದು ಹೇಳಿದ ನಂತರದಲ್ಲಿ ಎಲ್ಲರಿಗೂ ಕನ್‌ಫರ್ಮ್ ಆಗುತ್ತಿದೆ ಆಸೆಂಬ್ಲಿ ಡಿಸಾಲ್ವ್ ಆಗಬಹುದು ಎಂದು. ಈ ವಾತಾವರಣ ಇದ್ದಾಗಲೂ ಕೂಡ ಒಂದು ಪ್ರಶ್ನೆ ಎಲ್ಲರ ಮನಸ್ಸನ್ನು ಕಾಡುತ್ತದೆ. ಯಾವ ರಾಜಕೀಯ ಉದ್ದೇಶಕೋಸ್ಕರವಾಗಿ ಪೂರ್ಣವಾದಂಥ ಬಜೆಟ್‌ನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡನೆ ಮಾಡಿದರು, ಕೇವಲ ಫೋಷಣೆಗಳಿಗೋಸ್ಕರವಾಗಿ ಈ ಬಜೆಟ್ ಮಂಡನೆಯಾಯಿತೇ ಎನ್ನುವಂಥ ವಿಚಾರ ಇಡೀ ರಾಜ್ಯದ ಗಮನವನ್ನು ಸೆಳೆಯುತ್ತಿದೆ. ಈ ರಾಜ್ಯದ ಮುಖ್ಯಮಂತ್ರಿಗಳು ಐದನೇ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ, ಅಂದರೆ ಅವರಿಗೆ ಈ ಬಜೆಟ್‌ನ್ನು ಕಾರ್ಯರೂಪಕ್ಕೆ ತರುವವರು ನಾವಲ್ಲವೆಂದು ಗೊತ್ತಿತ್ತು. ಹಾಗಾಗಿ ಏನನ್ನು ಬೇಕಾದರೂ ಹೇಳಬಹುದು ಎಂಬ ಭಾವನೆ ಇಲ್ಲಿ ಅಡಕವಾಗಿದೆಯೆಂದು ನನಗನ್ನಿಸುತ್ತಿದೆ. ವಿಶೇಷವಾಗಿ ಬಜೆಟ್‌ನ್ನು ಮಂಡನೆ ಮಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಇವತ್ತು ಹೇಳಿದ್ದಾರೆ. ಅದು ನಮ್ಮ ಜಿಎಸ್‌ಡಿಪಿ ಹಿಂದಿನ ಎರಡು ಮೂರು ಸಾಲುಗಳಲ್ಲಿ ಬಹಳ ಕಡಿಮೆ ಇತ್ತು. ಅದು ಈ ವರ್ಷ 5 ರಿಂದ 6.2ಕ್ಕೆ ಹೆಚ್ಚಾಗಿದೆಯೆಂದ ಹೇಳಿದರು, ಆದರೆ ಹಿಂದಿನ ಬಜೆಟ್‌ನಲ್ಲಿ ಎಲ್ಲೂ ಕೂಡ ನಮ್ಮ ಜಿಎಸ್‌ಡಿಪಿ, ಎಲ್ಲಿಗೆ ಹೋಗಿದೆ ಎಂದು ಎಲ್ಲೂ ಹೇಳಿರಲಿಲ್ಲ. ಈಗ ಮೆಚ್ಚುಗೆ ಮಾತು ಹೇಳುವುದೆಂದರೆ, ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಏನಿತ್ತು, ಅವರೇ ಒಪ್ಪಿದ ರೀತಿಯಲ್ಲಿ ನಮ್ಮ ಕೈಗಾರಿಕಾ ಬೆಳವಣಿಗೆ ಕಳೆದ ಮೂರು ಸಾಲುಗಳಿಂದ 4 ರಿಂದ 2ಕ್ಕೆ ಕುಸಿತವಾಗಿತ್ತು. ಇವತ್ತು ಈ ದೇಶದ ಪ್ರಧಾನ ಮಂತ್ರಿಗಳು ಕೊಟ್ಟಂಥ feel good ಅಂಶವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ feel good ಒಂದೇ ಅಂಶವಲ್ಲ. ಈ ರಾಜ್ಯಕ್ಕೆ ಬಂಡವಾಳ ಬರಲಿಕೋಸ್ಕರವಾಗಿ ಎನ್ನುವುದನ್ನು ನಾವು ಒಪ್ಪಿಕೊಳ್ಳುವುದಾದರೆ ಈ ರಾಜ್ಯದಲ್ಲಿ ತಾವು ಇಲ್ಲಿಯವರೆಗೆ ಮಾಡಿರುವ ನಾಲ್ಕು ವರ್ಷಗಳ ಸಾಧನೆ ಏನು ಎಂಬ ಪಕ್ಷಿನೋಟವನ್ನು ಇಲ್ಲಿ ನೋಡಬೇಕಾಗುತ್ತದೆ. ಈ ಬಜೆಟ್ ಮಂಡನೆಯಲ್ಲಿ ಪ್ಯಾರಾ ನಂಬರ್ 16 ರಲ್ಲಿ ಬಹಳ ಸ್ಪಷ್ಟವಾದಂಥ ಒಂದು ಮಾತನ್ನು ಹೇಳಿದರು ' ನನ್ನ ಸರ್ಕಾರದ ವಿತ್ತೀಯ ಬಿಕ್ಕಟ್ಟು ಹಿಂದಿನ ಸರ್ಕಾರವೂ ನೀಡಿದ್ದ ತೆರಿಗೆ ಮತ್ತು ತೆರಿಗೆಯೇತರ ರೀತಿಯಿಂದ ಉದ್ಭವಿಸಿದ್ದು ಇದರಿಂದ ಆದಾಯದ ತಳಹದಿಯೇ ಕಿರಿದಾಗಿದೆ, ಸರ್ಕಾರಿ ವೆಚ್ಚಕ್ಕೆ ಸಂಬಂಧಿಸಿದಂತೆ ಅಂಗಳದಲ್ಲಿ ವಿಪರೀತ ಏರಿಕೆಯಾಗಿರುವುದು ಸಿಬ್ಬಂದಿವೆಚ್ಚ.' ಅಂದರೆ ಹಿಂದಿನ ಸರ್ಕಾರ, ನನಗೆ ಸರ್ಕಾರವನ್ನು ಬಿಡುವಂಥ ಸಂದರ್ಭದಲ್ಲಿ ಪೂರ್ಣವಾಗಿ ಟ್ರೆಜರಿ ಖಾಲಿ ಮಾಡಿ ಹೋಗಿದ್ದರು ಎಂಬ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಎಲ್ಲಿಂದ ಪ್ರಾರಂಭ ಮಾಡಿದೆವು ಎಂದು ನಾನು ಹೇಳಲು ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಕೇಳಲು ಬಯಸುವುದು ಹಿಂದೆ ತಾವು 1997–98 ಸಾಲಿನಲ್ಲಿ ಅವತ್ತು fiscal deficit 1610 ಕೋಟಿ ರೂಪಾಯಿಗಳು ಇತ್ತು. ಹಾಗಾದರೆ ಈಗ 2001–02ನೇ ಸಾಲಿನಲ್ಲಿ ನಿಮ್ಮ fiscal deficit 5969 ರೂ.ಗೆ ಏರಿದೆ. ಅಂದರೆ ಮುನ್ನೂರು ಪಟ್ಟು ಏರಿಕೆ ತಮ್ಮ deficitನಲ್ಲಿ ಆಗಿದೆ. ಹಾಗಾದರೆ ತಾವು ಕೊಟ್ಟಂಥ ಅಂಶ ಎಷ್ಟರಮಟ್ಟಿಗೆ ಸತ್ಯ ? ಒಂದು ಮಾತನ್ನು ಹೇಳಿದ್ದಾರೆ. ಸರ್ಕಾರಿ ವೆಚ್ಚಕ್ಕೆ ಸಂಬಂಧಿಸಿದಂತೆ ಅಂಗಳದಲ್ಲಿ ವಿಪರೀತ ಏರಿಕೆಯಾಗುತ್ತಿರುವುದು ಸಿಬ್ಬಂದಿ ವೆಚ್ಚ ಸರಿಯಾಗಿ

ಕೇಂದ್ರೀಕರಿಸದ ಯೋಗ್ಯವಲ್ಲದ ಸಹಾಯಧನಗಳು ಹಲವಾರು ಹಿತಾಸಕ್ತಿ ಗುಂಪುಗಳಿಗೆ ನೀಡಿರುವ ಅನುದಾನಗಳು, ಇಲ್ಲಿ ದೊಡ್ಡ ಪ್ರಶ್ನೆ ಬಹಳ ಪ್ರಮುಖವಾಗಿ ಕಾಡುವಂಥದ್ದು ಇವತ್ತು ವಿಧಾನಸಭೆಯಲ್ಲಿ ಈ ರಾಜ್ಯದಲ್ಲಿ ಆದಂಥ ಒಂದು ದೊಡ್ಡ ಸಾಧನೆ ಎಂದರೆ ಎಲ್ಲದಕ್ಕೂ ಕಮಿಷನ್‌ನ್ನು ನೇಮಕ ಮಾಡಿ, ಅಂದರೆ ಆಡ್ಮಿನಿಸ್ಟೇಟೀವ್ ರಿಫಾರ್ಮ್ ಕಮಿಷನ್, ಟ್ಯಾಕ್ಸ್ ರಿಫಾರ್ಮ್ ಕಮಿಷನ್, ಡಿಎಂ ನಂಜುಂಡಪ್ಪ ಕಮಿಷನ್, ಪೆಲ್ಟ್ ಟಾಸ್ಕಫೋರ್ಸ್ ಕಮಿಷನ್, ಹೀಗೆ ಲೆಕ್ಕವಿಲ್ಲದಷ್ಟು ಕಮಿಷನ್‌ಗಳನ್ನು ಮಾಡಿದಿರಿ. ಆದರೆ, ಕೊಟ್ಯಾಂತರ ರೂ.ಗಳ ಹಣವನ್ನು ಖರ್ಚು ಮಾಡಿದಂಥ ಈ ಸರ್ಕಾರ ಕೊನೆಯಲ್ಲಿ ರಾಜ್ಯಕ್ಕೆ ಕೊಟ್ಟಂಥ ಒಂದು ದೊಡ್ಡ ಬಳುವಳಿ ಎಂದರೆ ಈ ರಾಜ್ಯದ ಆಡಳಿತದಲ್ಲಿ ಸುಧಾರಣೆಯಾಗಿಲ್ಲ. ನಾನು ವಿರೋಧ ಪಕ್ಷದಲ್ಲಿ ಇದ್ದುಕೊಂಡು ಅದನ್ನು ಹೇಳಿದ್ದರೆ ಅಲ್ಲಿದಂಥವರು ಜೋರಾಗಿ ಹೇಳುತ್ತಿದ್ದರು. ಆದರೆ ಯಾರೂ ಹೇಳಿಲ್ಲ ? ಪೇಜ್ ನಂಬರ್ 16 ರಲ್ಲಿ ಈ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರೇ ಹೇಳಿದ್ದಾರೆ. ಹಲವಾರು ಹಿತಾಸಕ್ತಿ ಗುಂಪುಗಳಿಗೆ ನೀಡಿರುವಂಥ ಅನುದಾನಗಳೂ, ಕಾಲ ಮತ್ತು ವೆಚ್ಚ ಮೀರಿದ ಮೂಲ ಸೌಲಭ್ಯದ ಯೋಜನೆಗಳು ನಮ್ಮ ಜಾಲ್ತಿ ಖಾತೆಯಲ್ಲಿ ವಿಪರೀತ ಕೊರತೆಯನ್ನು ಉಂಟು ಮಾಡಿದೆ. ಇದಕ್ಕೆ ಸಂಬಂದಪಟ್ಟಂತೆ ಒಂದು ಅಂಕವನ್ನು ರಾಜ್ಯದ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ ಇವತ್ತು ರಾಜ್ಯದಲ್ಲಿ 31.3.2002ಕ್ಕೆ ರೆವಿನ್ಯೂ ಬೇಸ್ 36 ಪರ್‌ಸೆಂಟ್‌ಗೆ ಏರಿದೆ. ಆದರೆ, utilization of the borrowed fund to meet the revenue expenses was 17% in 1997-98. ಆದರೆ, 2001–02ನೇ ಸಾಲಿನಲ್ಲಿ ನಾವು ತರುವಂಥ ಸಾಲದಲ್ಲಿ 56 ರೂಪಾಯಿಗಳನ್ನು ನಾವು ಇವತ್ತು ಆ ಸಾಲವನ್ನು ತೀರಿಸಲು ಉಪಯೋಗಿಸುವಂಥ ವ್ಯವಸ್ಥೆಗಳಾಯಿತು. ಯಾವ ಸಾಲವನ್ನು ತಂಗೆವು ಅದನ್ನು ಯಾವುದೋ ಕ್ಯಾಪಿಟಲ್ ಆಸೆಟ್‌ಗೆಲ್ಲ ಅದನ್ನು ಶೇಕಡ 56 ಪರ್‌ಸೆಂಟ್‌ನ್ನು ಬೇರೆ ಸಾಲವನ್ನು ತೀರಿಸಲು ಉಪಯೋಗಿಸಿದ್ದೇವೆ. ನಿಜ. ಬಜೆಟ್‌ನ್ನು ಮಂಡನೆ ಮಾಡುವಾಗ ವಿಶೇಷವಾಗಿ ಈ ಸದನದಲ್ಲಿ ನೊಂದು ಹೇಳಬೇಕಾಗಿದೆ. ನಾನು ಹಿಂದಿನ ವಿಧಾನಸಬೆಯಲ್ಲಿ, ಮಾನ್ಯ ಕಾಗೋಡ್ ತಿಮ್ಮಪ್ಪನವರು ನಮಗೆ ಸಾಕಷ್ಟು ಕಲಿಸಿದ್ದಾರೆ, ಅವರೂ ವಿರೋಧ ಪಕ್ಷದಲ್ಲಿ ಇದ್ದರು. 1994 ರಿಂದ 1999 ರವರೆಗೆ–ಬಜೆಟ್‌ನ ಬಗ್ಗೆ ಆಗುತ್ತಿದ್ದಂಥ ಆರೋಗ್ಯಕರವಾದಂಥ ಚರ್ಚೆ ಇದು ಎಷ್ಟೋ ಬೆಳಕನ್ನು ಚೆಲ್ಲುವಂಥ ವ್ಯವಸ್ಥೆಗಳಾಗುತ್ತಿತ್ತು. ಆದರೆ ದುರ್ದೈವ ಈ ಸದನದಲ್ಲಿ ಹೊಸದಾಗಿ ಬಂದಂಥ ಯಾರೇ ಸದಸ್ಯರಿಗೂ ನಾವು ಏನನ್ನೂ ಕಲಿಸಿ ಕಳುಹಿಸಿಲ್ಲ ಎಂಬ ದುಃಖ ನಮ್ಮ ಮನಸ್ಸನ್ನು ಕಾಡುತ್ತದೆ. ವಿಶೇಷವಾಗಿ ಬಜೆಟ್‌ನ ಬಗ್ಗೆ ಯಾವುದೇ ಪ್ರಮುಖವಾದ ಚರ್ಚೆಗಳಾಗಿಲ್ಲ. ಈ ಒಂದು ಚರ್ಚೆ ಆಗಿದ್ದರೆ ಏನಾಗುತ್ತಿತ್ತು ? ಸನ್ಮಾನ್ಯ ಅಧ್ಯಕ್ಷರೇ, 2001–02ನೇ ಸಾಲಿನಲ್ಲಿ ಸರ್ಕಾರ ಇವತ್ತು KBJNL & KNNL ಇವರು ಸಾಲವನ್ನು ತೆಗೆದುಕೊಂಡರು. ಸಾಲವನ್ನು ತೆಗೆದುಕೊಂಡು ಅದನ್ನು ಆ ಕಂಪೆನಿಗೆ, ಅಂದರೆ ಆ ಸಂಸ್ಥೆಗೆ ಕೊಡುವ ಬದಲು 2001–02ನೇ ಸಾಲಿನಲ್ಲಿ deficit ಅನ್ನು, over draft ತೆಗೆದುಕೊಳ್ಳಬೇಕಾಗುತ್ತದೆ ಎಂಬ ಕಾರಣದಿಂದ, ರಾಜ್ಯದ ಮುಖ್ಯಮಂತ್ರಿಗಳು ನಾನು ಯಾವತ್ತು over draft ತೆಗೆದುಕೊಂಡಿಲ್ಲವೆಂದು ಇಲ್ಲಿ ಹೇಳಿದ್ದಾರೆ, ಹಾಗಾದರೆ ಈ ಸಂಸ್ಥೆಗೆ ಸೇರಿದಂತಹ 317.27 ಕೋಟಿ ರೂ.ಗಳನ್ನು ತಾವು ಪಬ್ಲಿಕ್ ಅಕೌಂಟಿನಲ್ಲಿ ಹೇಗೆ ಇಟ್ಟಿರಿ ?ಯಾರದ್ದು ಆ ಹಣ ? ರಾಜ್ಯ ಸರ್ಕಾರಕ್ಕೆ ಸಂಬಳ ಕೊಡಲಿಕ್ಕೆ ಸಾಧ್ಯವಾಗಲಿಲ್ಲ ಎಂದೇಳಿ ಈ ಹಣವನ್ನು ಪಬ್ಲಿಕ್ ಅಕೌಂಟ್‌ನಲ್ಲಿ ಇಟ್ಟು ಅದರ ಮೇಲೆ ಸಾಲವನ್ನು ರೈಸ್ ಮಾಡುವಂತಹ ಕೆಲಸವನ್ನು ಈ ಸರ್ಕಾರ ಮಾಡಿದೆ. ಇದನ್ನು ಸದನದಲ್ಲಿ ಚರ್ಚೆ ಮಾಡುವಂತಹ ವ್ಯವಸ್ಥೆ ಆಗಲಿಲ್ಲ. ಸನ್ಮಾನ್ಯ ಅಧ್ಯಕ್ಷರೇ,

ಬಹಳ ನೊಂದು ನಾನು ಈ ಬಜೆಟ್ ಅನ್ನು un-realistic variations ಅನ್ನು ಹೊಂದಿರುವಂತಹ ಬಜೆಟ್ ಎಂದು ಕರೆಯಬೇಕಾದಂತಹ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಏಕೆಂದರೆ. ಇವತ್ತು ನಮ್ಮ ಬಜೆಟ್ ಎಸ್ಟಿಮೇಟ್ ಅಂದರೆ ಸಾಮಾನ್ಯವಾಗಿ ಶೇಕಡ 2-3ರಷ್ಟು variations ಇರುವುದನ್ನು ನಾವು ನೋಡುತ್ತೇವೆ. ಹಣಕಾಸಿನ ಬಗ್ಗೆ ಬಹಳಷ್ಟು ಜ್ಞಾನ ಇರುವಂತಹ ಮಾನ್ಯ ಮುಖ್ಯಮಂತ್ರಿಗಳಿಂದ ನಾವು ಇದನ್ನು ನಿರೀಕ್ಷಣೆ ಮಾಡಿರಲಿಲ್ಲ 2001-02ನೇ ಸಾಲಿನಲ್ಲಿ ಬಜೆಟ್ ಎಸ್ಟಿಮೇಟ್ ಏನು ಮಾಡಿದ್ದರು. ಅದರಲ್ಲಿ ನಮಗೆ deficit ಆಗಿದ್ದಂತಹದ್ದು 12% 2002-03ನೇ ಸಾಲಿನಲ್ಲಿ ನಮಗೆ deficit 14% ಆಗಿತ್ತು. ಇದು realistic budget ಆಗುವುದಕ್ಕೆ ಸಾಧ್ಯವೇ ? ಈ ಪುಸ್ತಕ ಏತಕೋಸ್ಕರವಾಗಿ ಮಾಡಿದ್ದಾರೆ ? 2002-03ನೇ ಸಾಲಿನಲ್ಲಿ Revenue receipts shortfall 23% ಆದರೆ ಇವತ್ತು ತಾವು ತೋರಿಸಿರುವಂತಾದ್ದು ಕೇವಲ 315 ಕೋಟಿ ರೂ.ಗಳು ಇದು ನಾನು ಹೇಳುತ್ತಿರುವುದಲ್ಲ. CAG ವರದಿಯಲ್ಲಿ ಬಂದಿರುವಂತಹ comments ಅದರ ಪ್ರಕಾರದಲ್ಲಿ 23% ನೀವು ಹಣವನ್ನು recover ಮಾಡಲಿಕ್ಕಾಗಲಿಲ್ಲ ಎನ್ನುವುದಾದರೆ, ಯಾವ ರೀತಿಯಾದಂತಹ finance discipline ನಿಮ್ಮದಾಗಿದೆ ಎಂದು ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಇವತ್ತು ಕೇಳಬೇಕಾಗಿದೆ. ನನ್ನ ಮುಂದರೆ 2001-02,2002-03,2003-04ನೇ ಸಾಲಿನ datas ಇವೆ. ನೀವು 2001-02 ರಲ್ಲಿ 23,450 ಕೋಟಿ ರೂ.ಗಳ revenue receipts ಬರುತ್ತದೆಂದು expect ಮಾಡಿ ಲೆಕ್ಕಾಚಾರ ಹಾಕಿದ್ದೀರಿ. ಆದರೆ actual ಆಗಿ ಆಗಿದ್ದು ಕೇವಲ 21.00 ಕೋಟಿ ರೂ.ಗಳು ಮಾತ್ರ 2,212 ಕೋಟಿ ರೂ.ಗಳ variations ಇದರಲ್ಲಿ ಆಯಿತು. 2002ನೇ ಸಾಲಿನಲ್ಲಿ ನೀವು 26,000 ಕೋಟಿ ರೂ.ಗಳನ್ನು ನೀವು expect ಮಾಡಿದ್ದೀರಿ, ಆದರೆ ಆಗಿದ್ದು ಕೇವಲ 22,000 ಕೋಟಿ ರೂ.ಗಳು ಮಾತ್ರ. 4,425 ಕೋಟಿ ರೂ.ಗಳ deficit ನಿಮಗೆ ಇಲ್ಲಿ ಆಯಿತು. ಪ್ರಸ್ತುತ ಸಾಲಿನಲ್ಲಿ ನಿಮ್ಮ deficit ಕೋಟಿ ರೂ.ಗಳಾಗಿದೆ ನೀವೇನು expect ಮಾಡಿದ್ದಿರೋ, ಅದರಲ್ಲೇ 6,000 ಕೋಟಿ ರೂ.ಗಳು ಬಂದಿಲ್ಲ. ಎನ್ನುವುದಾದರೆ ಹೇಗೆ ? ಮುಂದುವರೆದು, ನೀವು ಮಾಡಿರುವಂತಹ expenditure ನೋಡಿದರೆ ಬಹಳ ಆಶ್ಚರ್ಯ ಆಗುತ್ತದೆ. 2001-02ನೇ ಸಾಲಿನಲ್ಲಿ 1,432 ಕೋಟಿ ರೂ.ಗಳನ್ನು ಖರ್ಚು ಮಾಡಿಲ್ಲ. 2002-03ರಲ್ಲಿ 2,461 ಕೋಟಿ ರೂ.ಗಳನ್ನು ಖರ್ಚು ಮಾಡಿಲ್ಲ. ಪ್ರಸ್ತುತ ಸಾಲಿನಲ್ಲಿ ಎಷ್ಟು ದುಡ್ಡು ಖರ್ಚು ಮಾಡಿಲ್ಲ ಎಂಬ ವಿವರಗಳನ್ನು ಮಾನ್ಯ ಮುಖ್ಯಮಂತ್ರಿಗಳೇ ನೀಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಮುಂದೆ ಇವತ್ತು fiscal marksmanship ಇದೆ. ಇದರ ಪ್ರಕಾರದಲ್ಲಿ ಯಾವುದೇ ಒಂದು ಬಜೆಟ್ ತುಂಬಾ ಚೆನ್ನಾಗಿದೆ ಎನ್ನುವುದಾದರೆ, ನಮ್ಮ ಮುಂದೆ ಇರುವಂತಹ fiscal marksmanship ಏನಿದೆ, ಆ marksmanship ಆಧಾರದ ಮೇಲೆ ನಾವು ಅದು ಸೌಂಡ್ ಬಜೆಟ್ಟೋ actual ಬಜೆಟ್ಟೋ, boosted up ಆಗಿದೆಯೋ ಎನ್ನುವುದರ ಬಗ್ಗೆ ನಿರ್ಣಯವನ್ನು ಮಾಡುತ್ತೇವೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇರುತ್ತಾರೆ ಎಂದು ನಾನು ಅಂದುಕೊಂಡಿದ್ದೆ, ಕಾರಣ ನಾನು ಅವರಿಗೆ comparison ಅನ್ನು ಕೊಡಬೇಕಾಗಿತ್ತು. 2001-02ನೇ ಸಾಲಿನಿಂದ 2003-04ನೇ ಸಾಲಿನವರೆಗೆ ಇವತ್ತು revenue shortfall 12% ಅಂದರೆ 2,006 ಕೋಟಿ ರೂ.ಗಳ shortage ಆಗಿದೆ. shortfall in expenditure 7% ಅಂದರೆ 1,346 ಕೋಟಿ ರೂ.ಗಳ shortfall ಆಗಿದೆ. ಅಷ್ಟು ಮಾತ್ರವಲ್ಲ, ಇವತ್ತು ನಾವು ಟ್ಯಾಕ್ಸ್‌ನ ಬಗ್ಗೆ ಬಹಳಷ್ಟು ಹೇಳುತ್ತೇವೆ, ಆದರೆ realisation ಏನಿದೆ ಅಂದರೆ, tax revenueನಲ್ಲಿ 9% minus ಆಗಿದೆ, non taxನಲ್ಲಿ 16% ಮತ್ತು State share from union

taxes 15% ಆಗಿದೆ. ಅದು ಏಕೆ ಅನ್ನುವುದನ್ನು ನಾನು ಹೇಳುತ್ತೇನೆ, ರಾಜ್ಯದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರವನ್ನು ದೂಷಣೆ ಮಾಡಿದ್ದಾರೆ. ಅದಕ್ಕೆ ಉತ್ತರವನ್ನು ಕೊಡುವಂತಹ ಸಂದರ್ಭ ಮುಂದೆ ಬರುತ್ತಿದೆ, ಆಗ ನಾನು ಎಲ್ಲವನ್ನೂ ಹೇಳುತ್ತೇನೆ, ಆದರೆ, ನಿಮ್ಮ contributions ಏನು ? ಕೇಂದ್ರದ್ದು ನೀವು ಅಮೇಲೆ ಕೇಳುವಿರಂತೆ, ಕಳೆದ ಮೂರು ವರ್ಷಗಳ ಕಾಲದಲ್ಲಿ ನೀವೇನು estimates ಅನ್ನು ಮಾಡಿದ್ದಿರೋ, ಅದರಲ್ಲಿ ಶೇಕಡ 23ರಷ್ಟು ನೀವು achieve ಮಾಡಲಿಕ್ಕಾಗಲಿಲ್ಲ ಎನ್ನುವುದಾಗಿ, ರಾಜ್ಯದ ವ್ಯವಸ್ಥೆಗಳು ಏನು ? 2002–03ನೇ ಸಾಲಿನಲ್ಲಿ shortfall 14%, ಅಂದರೆ 2,629 ಕೋಟಿ ರೂ.ಗಳು revenue receipts ನಲ್ಲಿ shortfall ಬಿದ್ದಿದೆ. Revenue expenditureನಲ್ಲಿ 12% shortfall ಆಗಿದೆ. ಅಂದರೆ 2,589.14 ಕೋಟಿ ರೂ.ಗಳು shortfall ಆಗಿದೆ. ಅಷ್ಟು ಮಾತ್ರವಲ್ಲ, ದುಃಖದ ಸಂಗತಿ ಏನೆಂದರೆ, ಯಾವ social sector ಎಂದು ಕರೆಯುತ್ತೇವೆಯೋ, ಮಾನ್ಯ ಕಾಗೋಡ್ ತಿಮ್ಮಪ್ಪನವರ ಆರೋಗ್ಯ ಕ್ಷೇತ್ರ ಇರಬಹುದು. Education Department ಇರಬಹುದು ಅದು ವಿಶೇಷವಾಗಿ ಸಮಾಜ ಕಲ್ಯಾಣ ಇಲಾಖೆ ಇರಬಹುದು, ಇಂತಹದ್ದಕ್ಕೆ ಎಷ್ಟೆಷ್ಟು percentage ತಾವು ಹಣವನ್ನು ಖರ್ಚು ಮಾಡಲಿಕ್ಕೆ ಆಗಿಲ್ಲ ಎನ್ನುವಂತಹ ವಿಚಾರವನ್ನು ಶ್ವೇತಪತ್ರವೊಂದರ ಮೂಲಕ ಈ ಅಸೆಂಬ್ಲಿ ಡಿಸಾಲ್ವ್ ಆಗುವುದಕ್ಕೆ ಮುಂಚೆ ರಾಜ್ಯದ ಮುಖ್ಯಮಂತ್ರಿಗಳು ಈ ಸದನದ ಮುಂದಿಡಲಿ. ಸತ್ಯಾಸತ್ಯತೆಗಳನ್ನು ಅವರು ಸದನದ ಮುಂದಿಡಲಿ. ಆಗ ಈ ರಾಜ್ಯದ ಹಣಕಾಸಿನ ಸ್ಥಿತಿ ಸೌಂಡ್ ಆಗಿದೆಯೋ ಇಲ್ಲವೋ ಎನ್ನುವುದನ್ನು ಹೇಳಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಇದನ್ನು ನಾನು ಹೇಳಿದ್ದಲ್ಲ Sri K.B.Lakshman Rao, Accountant General ಅವರು ರಾಜ್ಯದ ಹಣಕಾಸಿನ ಕಾರ್ಯದರ್ಶಿಯವರಿಗೆ ರಾಜ್ಯದ ವ್ಯವಸ್ಥೆಗಳು, ಆರ್ಥಿಕ ಸ್ಥಿತಿಗಳು ಹೇಗಿದ ಎಂಬ ಬಗ್ಗೆ ಪತ್ರವನ್ನು ಬರೆದಿದ್ದಾರೆ ಬಜೆಟ್ ಭಾಷಣದ 19ನೇ ಪ್ಯಾರಾದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಹೇಳಿದ್ದಾರೆ;

> ನಮ್ಮ ಸುಧಾರಣಾ ಕ್ರಮಗಳು ಕರ್ನಾಟಕವನ್ನು ಆರ್ಥಿಕ ಸುಭದ್ರತೆಯ ತಾಣದೆಡೆಗೆ ಕರೆದೊಯ್ಯುತ್ತಿವೆ, ನಾವು 2005–06ರ ವೇಳೆಗೆ ರಾಜಸ್ವ ಉಳಿಕೆಯನ್ನು ಸಾಧಿಸಲು ಮತ್ತು ವಿತ್ತೀಯ ಕೊರತೆಯನ್ನು ಜಿಎಸ್‌ಡಿಪಿಯ ಶೇ. 3ಕ್ಕೆ ಇಳಿಸುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನ ನಡೆಸಿದ್ದೇವೆ. ಯಾಪಾಗ ? ಇಲ್ಲಿಯವರೆಗೆ ನೀವೇನು ಮಾಡಿದ್ದೀರಿ ಎನ್ನುವುದನ್ನು ನೀವು ಹೇಳಿ ಎಂದರೆ, ಮುಂದಕ್ಕೆ ಮಾಡುತ್ತೇವೆ ಎಂದು ನೀವು ಹೇಳುತ್ತಿದ್ದೀರಿ. ನೀವು ಆರ್ಥಿಕ ಸುಧಾರಣೆಗಳನ್ನು ತಂದಿರಲ್ಲಾ, ಅದರ ಫಲವೇನು ? ಅದರ ಫಲ ಏನೆಂದರೆ, ಈ ರಾಜ್ಯವನ್ನು ನೀವು ಸಾಲಗಾರ ರಾಜ್ಯವನ್ನಾಗಿ ಮಾಡಿದ್ದೀರಿ. ಇವತ್ತು ಅದರ ಬಗ್ಗೆ ಡಾಟಾ ಸಹ ಇಲ್ಲಿ ಕೊಟ್ಟಿದ್ದೀರಿ.

ಛೇರ್ಮನ್ : (ಮಾನ್ಯ ಯು.ಆರ್. ಸಭಾಪತಿಯವರು) ಆಧ್ಯಕ್ಷ ಪೀಠವನ್ನು ಅಲಂಕರಿಸಿದರು)

> ರಾಜ್ಯವು 2001–02ರಲ್ಲಿ ಶೇಕಡ 5.26ರಷ್ಟಿದ್ದ ವಿತ್ತೀಯ ಕೊರತೆಯನ್ನು 2003–04ರಲ್ಲಿ ಶೇಕಡ 4.26ಕ್ಕೆ ಮತ್ತು ಇದೇ ಅವಧಿಯಲ್ಲಿ ರಾಜಸ್ವ ಕೊರತೆಯನ್ನು ಶೇಕಡ 3ರಿಂದ ಶೇಕಡ 1.01ಕ್ಕೆ ಇಳಿಸಿದೆ.

ಮಾನ್ಯ ಅಧ್ಯಕ್ಷರೇ, ದಯಮಾಡಿ ಕೈ ಮುಗಿದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಬೇರೆ ಕಡೆಗೆ ಎಲ್ಲಾದರೂ ಕೂಡ ಸತ್ಯಕ್ಕೆ ದೂರವಾದಂತಹ ವಿಚಾರವನ್ನು ಹೇಳಲಿ. ಸದನದೊಳಗೆ ಕೂಡ ಸುಳ್ಳು ಹೇಳುವಂತಹ ವ್ಯವಸ್ಥೆಗಳು ಆಗಬೇಕಾ ? ಅದೂ ಬಜೆಟ್‌ಒಳಗಡೆ. ಇದನ್ನು ನಾನು ನಮ್ರತೆಯಿಂದ ದಯಮಾಡಿ

ಇದನ್ನು ವಿತ್‌ಡ್ರಾ ಮಾಡಿ ಎಂದು ಕೇಳುತ್ತೇನೆ, ಕಾರಣ, ಇವರು ಕೊಟ್ಟಂತಹ ಯಾವುದೇ ಅಂಶಗಳೂ ಕೂಡ ಸತ್ಯಕ್ಕೆ ದೂರವಾದಂತದ್ದು, ಇದಕ್ಕೆ ಡಾಟಾಸ್ ಏನಿದೆ, ಅದಲ್ಲದೆ ಬೇರೆ ಏನಿದೆ ಎನ್ನುವುದನ್ನು ನಾನೇ ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. 2001–02ನೇ ಸಾಲಿನಲ್ಲಿ ಇವತ್ತು expenditureನಲ್ಲಿ deficit ಇರುವಂತಾದ್ದು 7%. Expenditure ನಲ್ಲಿ Social sectorಗೆ, 7% ಇವತ್ತು shortfall ಬಿದ್ದಿದೆ. Grant-in-aidನಲ್ಲಿ 17% social sectorಗೆ ಆಗಿದೆ. 2002–03ನೇ ಸಾಲಿನಲ್ಲಿ ಇವತ್ತು economic servicesಗೆ, shortfall 22% shortfall ಬಿದ್ದಿದೆ. ನಾನು ಇಷ್ಟೆಲ್ಲವನ್ನೂ ಹೇಳಿದ ಮೇಲೂ ಕೂಡ ಇದು ambiguity ಇದೆ. ಎಂದು ಅನ್ನಿಸುತ್ತದೆಂದು ನಾನು ಅಂದುಕೊಂಡಿದ್ದೇನೆ. ಇದರ ಜೊತೆಗೆ projections ಏನನ್ನೂ ಕೊಟ್ಟಿದ್ದಾರೋ. ಈ outlay ಇದರಲ್ಲಿ ಯಾವುದೇ ರೀತಿಯಾದಂತಹ ಒಂದು ಸತ್ಯಾಂಶ ಇಲ್ಲ. ಸತ್ಯಕ್ಕೆ ದೂರವಾದಂತಹ ಅಂಶಗಳನ್ನು ಇಲ್ಲಿ ಕೊಡಲಾಗಿದೆ. ನಾನು ರಾಜ್ಯದ ಮುಖ್ಯಮಂತ್ರಿಗಳನ್ನು ಕೇಳಲಿಕ್ಕೆ ಬಯಸುತ್ತೇನೆ, ಇವತ್ತು shortfall ಬಂತಲ್ಲಾ, ಅದನ್ನು ಯಾವುದರಿಂದ ತುಂಬುತ್ತೀರಿ ? ನಿಮಗೆ shortfall ಇದ್ದದ್ದು 1,039 ಕೋಟಿ ರೂ.ಗಳು ಅದರೆ ಈ ವರ್ಷ ಲಾಟರಿ ಮೂಲಕ ಅಂದರೆ, non-tax revenuesನಲ್ಲಿ 4,000 ಕೋಟಿ ರೂ.ಗಳನ್ನು ನೀವು ಇವತ್ತು expect ಮಾಡಿದ್ದೀರಿ. is it realistic ? ಇದು ಯಾವತ್ತಾದರೂ ಸಾಧ್ಯವಿದೆಯೇ ? ಈ ರಾಜ್ಯದ ಮುಖ್ಯ ಮಂತ್ರಿಗಳು ಕೇವಲ 1100 ಕೋಟಿ ರೂಪಾಯಿಗಳನ್ನು ಈ ಖಾತೆಯಲ್ಲಿ ಇದುವರೆಗೆ ತೆಗೆಯುವುದಕ್ಕೆ ಆಗಲಿಲ್ಲ. How can we estimate four thousand crores ? ಈ ಮಾತನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಹಿಂದಿನ ಸರ್ಕಾರ ನಮಗೆ ಚುಕ್ಕಾಣಿಯನ್ನು ಕೊಟ್ಟು ಹೋದ ಸಂದರ್ಭದಲ್ಲಿ ರಾಜ್ಯದ ಡಿಫಿಸಿಟ್ 277 ಕೋಟಿ ರೂ.ಗಳು ಇತ್ತು 2001–02ನೇ ಸಾಲಿಗೆ ಇದರ ಕೊರತೆ 3,294 ಕೋಟಿ ರೂಪಾಯಿಗಳು ಆಯಿತು. ಈಗ 2002–03ನೇ ಸಾಲಿಗೆ ಇದು 4,100 ಕೋಟಿ ರೂಪಾಯಿಗಳು ಆಗಿದೆ. ಇದು ಯಾರ ಹೌದು, ಹಿಂದಿನ ಸರ್ಕಾರ ನಿಮಗೆ ಏನೂ ಇಲ್ಲದೆ ಬಿಟ್ಟು ಹೋಗಿದ್ದರು ಒಪ್ಪಿಕೊಳ್ಳೋಣ' ಅವರು ಬಿಟ್ಟಿದ್ದು ಎಷ್ಟು ಅಂದರೆ 277 ಕೋಟಿ ರೂಪಾಯಿಗಳು ಆದರೆ ತಾವು ಮಾಡಿದ್ದು ಏನು ? ಇವತ್ತು ಈ ರಾಜ್ಯದಲ್ಲಿ ಅರ್ಥ ಮಂತ್ರಿಗಳು ನಮಗೆ ಹೊಸ ಪಾಠ ಕಲಿಸಿಕೊಟ್ಟಿದ್ದಾರೆ. ಅದು ಏನೆಂದರೆ, ಬಜೆಟ್‌ನಲ್ಲಿ ಹಣ ತೋರಿಸಿದರೆ ಅದನ್ನು ಹೇಗೆ ತೆಗೆದುಕೊಳ್ಳುತ್ತೀರಿ ಎಂಬುದನ್ನು ತೋರಿಸಬೇಕು, ಅಂದರೆ ಸಾಲ ಎಲ್ಲಿ ಪಡೆಯುತ್ತೀರಿ ಎಂದು ತೋರಿಸಬೇಕು. ಅದಕ್ಕೆ ಒಂದು ಹೊಸ ಸಿಸ್ಟಮ್ ಬಂದಿದೆ. ಅದು ಏನೇಂದರೆ, ಹಾಫ್ ಬಜೆಟ್ ಬಾರೋಯಿಂಗ್, ಬಜೆಟ್‌ಗೆ ತೋರಿಸದೆ ಇರುವ ರೀತಿಯಲ್ಲಿ Half Budget borrowing. Half Budget borrowing is against to the Constitutions. it is against to the rule.ವಿಧಾನಸಭೆಯ ಅನುಮೋದನೆ ಪಡೆಯದೆ ಪಡೆದ ಯಾವುದೇ ಹಾಫ್ ಬಜೆಟ್ ಬಾರೋಯಿಂಗ್ಸ್ ಇದೆ. ಇದು ಕಾನೂನು ಬಾಹಿರ. ಕಳೆದ ನಾಲ್ಕು ವರ್ಷಗಳಲ್ಲಿ ಈ ಸರ್ಕಾರ ಇದೇ ಕೆಲಸವನ್ನು ಮಾಡಿಕೊಂಡು ಬಂದಿದೆ. ಈ ವರ್ಷ 2001–02ನೇ ಸಾಲಿನಲ್ಲಿ ಒಂದು ಹೊಸ ಸಿಸ್ಟಮ್ ಕಂಡುಹಿಡಿದರು. ನೀರಾವರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಸಾಲ ಮುಂಚಿನ ಬಜೆಟ್‌ಗಳಲ್ಲಿ ನೋಡುತ್ತಿದ್ದೇವೆ. ನೀರಾವರಿ ಇಲಾಖೆಯಲ್ಲಿ ಮೈನರ್ ಇಂಗ್ಲೀಷನ್‌ಗೆ ಇಷ್ಟು, ಮೇಜರ್ ಇರಿಗೇಷನ್‌ಗೆ ಎಷ್ಟು ಎಂದು ಅಲೋಕೇಷನ್ ಮಾಡಿ ಇಡುತ್ತಿದ್ದರು. ಆದರೆ ಈಗ ಹೊಸದಾಗಿ ನಮಗೆ ಜಲ ನಿಗಮಗಳನ್ನು ನಿರ್ಮಾಣ ಮಾಡಿದರು. ಕೆಬಿಜೆಎನ್‌ಎಲ್, ಮತ್ತು ನೀರಾವರಿ ನಿಗಮ ಈ ಎರಡು ಸಂಸ್ಥೆಗಳಿಂದ ತಾವು ಬಾಂಡಿನ ಮೂಲಕ ರೈಸ್

ಮಾಡಿರುವಂತಹ ಸಾಲದ ಮೊತ್ತ 1,056 ಕೋಟಿ ರೂಪಾಯಿಗಳು. ಆದರೆ ಇದರ ರಿಯಲೈಸೇಷನ್ ಎಷ್ಟು ? ಒಟ್ಟು ನೀರಾವರಿಗೋಸ್ಕರ ಇಲ್ಲಿಯವರೆಗೆ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ನೀವು ಬೇರೆ ಬೇರೆ ಸಾಲದ ರೂಪದಲ್ಲಿ ತಂದಿದ್ದೀರಿ. what is the realisation ? ನಾಲ್ಕು ವರ್ಷಗಳಲ್ಲಿ ಕೇವಲ 10.08 ಕೋಟಿ ರೂಪಾಯಿಗಳು ಅಂದರೆ, 4,000 ಕೋಟಿ ರೂಪಾಯಿಗಳನ್ನು ಬೇರೆ ಕಡೆಯಿಂದ ತಂದಿದ್ದೀರಿ. ಇದರ ರಿಯಲೈಸೇಷನ್ ಎಷ್ಟಾಗಿದೆ ಅಂದರೆ ಕೇವಲ 10 ಕೋಟಿ ರೂ.ಗಳು ನಾನು ಆಗಲೇ ಹೇಳಿದ ಹಾಗೆ, ಹಾಫ್ ಬಜೆಟ್ ಬಾರೋಯಿಂಗ್ಸ್ ಎಂದು ಹೊಸ ಸಿಸ್ಟಮ್ ಮಾಡಿ 2001-02ನೇ ಸಾಲಿನಲ್ಲಿ 6000 ಕೋಟಿ ರೂಪಾಯಿಗಳನ್ನು ಈ ರೀತಿಯಾಗಿ ಬಾರೋಯಿಂಗ್ಸ್‌ನಲ್ಲಿ ತಾವು ತೆಗೆದುಕೊಂಡಿದ್ದೀರಿ. ಅದರಲ್ಲಿ ಇಂಟರೆಸ್ಟ್ 800 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ನೊಂದ ಮನದಿಂದ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ ಕಾರಣ ಇವತ್ತು ನಮ್ಮ ಮುಂದೆ ಟ್ರಾನ್ಸ್‌ಫರೆನ್ಸಿ ಆಕ್ಟ್ ಇದೆ. ಇದಲ್ಲದೆ ಹಾಫ್ ಬಜೆಟ್ ಬಾರೋಯಿಂಗ್ಸ್‌ನಲ್ಲಿ ತಾವು ಸರ್ಕಾರ ನೇರ ಬೇರೆ ಸಂಸ್ಥೆಗಳಿಂದ ಹಣವನ್ನು ಪಡೆದಿದ್ದೀರಿ. ಸಿಎಜಿ, ಕೂಡ ಅವರು ತಮ್ಮ ವರದಿಯಲ್ಲಿ ಇದೇ ಅಬ್ಸರ್ವೇಷನ್ಸ್ ಮಾಡಿದ್ದಾರೆ. ಹಾಫ್ ಬಜೆಟ್ ಬಾರೋಯಿಂಗ್ಸ್‌ನಲ್ಲಿ ಯಾವುದೇ ಟ್ರಾನ್ಸ್‌ಫರೆನ್ಸಿ ಇಲ್ಲ. ಟ್ರಾನ್ಸ್‌ಫರೆನ್ಸಿ ಇಲ್ಲದೆ ತಾವು ಕೃಷ್ಣ ಭಾಗ್ಯ ಜಲ ನಿಗಮ, ಕರ್ನಾಟಕ ನೀರಾವರಿ ನಿಗಮ, ಕರ್ನಾಟಕ ರೋಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಕರ್ನಾಟಕ ಸ್ಟೇಟ್ ಇಂಟರ್‌ನಷಲ್ ಅಂಡ್ ಇನ್‌ವೆಸ್ಟ್‌ಮೆಂಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಸ್ಲಂ ಕ್ಲೀಯರೆನ್ಸ್ ಬೋರ್ಡ್ ರಾಜೀವ್‌ಗಾಂಧಿ ರೂರಲ್ ಹೌಸಿಂಗ್ ಕಾರ್ಪೊರೇಷನ್, ಕಿಯೋನಿಕ್ಸ್, ಕರ್ನಾಟಕ ರೆಸಿಡೆನ್‌ಷಿಯಲ್ ಎಜುಕೇಷನ್ ಇನ್‌ಸ್ಟಿಟ್ಯೂಷನ್ಸ್ ಸೋಸೈಟಿ, ಕರ್ನಾಟಕ ಮೋಲಿಸ್ ಹೌಸಿಂಗ್ ಕಾರ್ಪೊರೇಷನ್, ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಇವೆಲ್ಲವೂ ಸೇರಿ ಇಲ್ಲಿಯವರೆಗೆ ತಾವು ಸುಮಾರು 20,000 ಕೋಟಿ ರೂಪಾಯಿ ಸಾಲ ತೆಗೆದುಕೊಂಡಿದ್ದೀರಿ. ಇದೆಲ್ಲ ಬಜೆಟ್‌ನಲ್ಲಿ ಎಲ್ಲಿ ಇದೇ ? ಎಲ್ಲಿಯೂ ಅದನ್ನು ತೋರಿಸುವ ವ್ಯವಸ್ಥೆಗಳೂ ಆಗಿಲ್ಲ. ಅಂದರೆ ಇವತ್ತು ಇಂತಹ ನಿಗಮಗಳನ್ನು ನಿರ್ಮಾಣ ಮಾಡಿ ಇದರ ಮೂಲಕ ಬಜೆಟ್‌ನಲ್ಲಿ ತೋರಿಸದೆ ಇರುವ ರೀತಿಯಲ್ಲಿ ರಾಜ್ಯಕ್ಕೆ ಸಾಲ ಮಾಡುವಂತಹ ಮೊದಲನೇ ಮುಖ್ಯ ಮಂತ್ರಿ ಈ ರಾಜ್ಯದ ಹಣಕಾಸಿನ ಮಂತ್ರಿಗಳಾಗಿದ್ದಾರೆಂದು ನಾನು ನೋವಿನಿಂದ ಹೇಳಬೇಕಾಗಿದೆ. ಅಷ್ಟು ಸಾಲುವುದಿಲ್ಲವೆಂದು ಹೇಳಿ ಬಜೆಟ್‌ನಲ್ಲಿ ಮೂರು ನಿಗಮಗಳನ್ನು ತೋರಿಸಿದ್ದಾರೆ. ಯಾರ ಪುರುಷಾರ್ಥಕ್ಕೋಸ್ಕರ ? ಕರ್ನಾಟಕ ಸಣ್ಣ ನೀರಾವರಿ ನಿಗಮ, ಪಶ್ಚಿಮ ವಾಹಿನಿ ನೀರಾವರಿ ನಿಗಮ, ಕರ್ನಾಟಕ ಕೃಷಿ ಅಭಿವೃದ್ಧಿ ನಿಗಮ, ಮೂರು ನಿಗಮಗಳು ಏಕೆ ? ಕಾರಣ ನಮ್ಮಲ್ಲಿ ಕೊಡಲಿಕ್ಕೆ ಹಣ ಇಲ್ಲ. ಅದಕ್ಕೋಸ್ಕರ ಆ ನಿಗಮಗಳ ಹೆಸರಿನಲ್ಲಿ ಇವತ್ತು ಜನಗಳಿಂದ ಬಾಂಡ್ಸ್ ರೈಸ್ ಮಾಡುವುದು, ಆದರೆ ಇನ್ನೊಂದು ಬಹಳ ಪ್ರಮುಖವಾಗಿ ಇಲ್ಲಿ ಇರುವುದು ಎಂದರೆ, ನಾವು ಸಾಲ ರೈಸ್ ಮಾಡಿರುವುದನ್ನು ನಮ್ಮ ಬಜೆಟ್‌ನಲ್ಲಿ ತೋರಿಸಿಲ್ಲ ಆದರೆ ಸಾಲ ತೀರಿಸಲಿಕ್ಕೋಸ್ಕರವಾಗಿ ಕೊಡುವಂತಹ ಬಡ್ಡಿ ಮತ್ತು ಅಸಲು ಎನು ಇದೆ, ಅದನ್ನು ನಾವು ನಮ್ಮ ಬಜೆಟ್‌ನಲ್ಲಿ ತೋರಿಸಿದ್ದೇವೆ. ಮತ್ತು ಮಂಜೂರಾತಿ ಪಡೆದುಕೊಂಡಿದ್ದೇವೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು, ನನಗೆ ಫೈನಾನ್ಸಾನ್ಸ್‌ನಲ್ಲಿ ಅಷ್ಟು ಅನುಭವ ಇಲ್ಲ. ಹಾಫ್ ಬಜೆಟ್ ಬಾರೋಯಿಂಗ್ಸ್‌ಗೆ ಈ ಸದನದ ಒಪ್ಪಿಗೆ ತೆಗೆದುಕೊಳ್ಳಬೇಕೇ ಬೇಡವೇ ? ತೆಗೆದುಕೊಳ್ಳಬೇಕಾಗಿದ್ದಾರೆ ಇಲ್ಲಿಯವರೆಗೆ ತೆಗೆದುಕೊಂಡಿದ್ದೀರಾ ? ತೆಗೆದುಕೊಂಡಿಲ್ಲ ಎನ್ನುವುದಾದರೆ ಕಾನ್‌ಸ್ಟಿಟ್ಯೂಷನ್‌ಲ್ಲಿ ಎಲ್ಲೆಲ್ಲಿ

ಇಲ್ಲವೇ ? ಇದನ್ನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ರಾಜ್ಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದೊಂದು ಸಮಯದಲ್ಲಿ ಒಂದೊಂದು ಘೋಷಣೆಗಳನ್ನು ಮಾಡಿದರು ಅದರಲ್ಲಿ ಒಂದು ಟ್ರಾನ್ಸ್‌ಫರ್ಸ್ ಆಕ್ಟ್. ಟ್ರಾನ್ಸ್‌ಫರೆನ್ಸಿ ಆಕ್ಟ್ ಈ ರಾಜ್ಯದಲ್ಲಿ ಬಂದಿತ್ತು. ಬಂದ ನಂತರ ಅದದ್ದು ಏನು ? ರಾಜ್ಯದಲ್ಲಿ ವ್ಯವಸ್ಥಿತವಾಗಿ ಬೇರೆ ಬೇರೆ ಇಲಾಖೆಗಳಲ್ಲಿ ಕೊಳ್ಳೆ ಹೊಡೆಯುವುದಕ್ಕೋಸ್ಕರ ಬೇಕಾದಂತಹ ವ್ಯವಸ್ಥೆಗಳು ಆದವು. ನಾನು ಈ ಮಾತನ್ನು ಜವಾಬ್ದಾರಿಯುತವಾಗಿ ಹೇಳುತ್ತಿದ್ದೇನೆ. ನಾನು ಒಬ್ಬ ಮಾತ್ರ ಹೇಳಲಿಲ್ಲ. ಆ ನಂತರ ಹೇಳುತ್ತೇನೆ, ಸಿಎಜಿ ಕೂಡ ಅದೇ ಅಬ್ಸರ್ವೇಷನ್ ಮಾಡಿದ್ದಾರೆ. ಇವತ್ತು ನಾನು ಆಗಲೀ ಹೇಳಿದೆ, ಹಾಫ್ ಬಜೆಟ್ ಬಾರೋಯಿಂಗ್ಸ್ ಎಲ್ಲಿಗೆ ? ಕರ್ನಾಟಕ ಅರ್ಬನ್ ವಾಟರ್ ಸಪ್ಲೆ ಅಂಡ್ ಡ್ರೈನೇಜ್ ಬೋರ್ಡ್‌ಗೆ ಸಾಲ ತೆಗೆದುಕೊಂಡಿರಿ, ಎಷ್ಟು ಸಾವಿರ ಕೋಟಿ ರೂಪಾಯಿ ಸಾಲ ತೆಗೆದುಕೊಂಡಿರಿ ? ಎಲ್ಲಾ ಮುನಿಸಿಪಾಲಿಟಿಗಳು ಸೇರಿ 100 ಕೋಟಿ ರೂ.ಗಳು ಇದ್ದುದ್ದು 140 ಕೋಟಿ ರೂ.ಗಳಿಗೆ ಹೋಯಿತು. ಎಲ್ಲ ಮುನಿಸಿಪಾಲಿಟಿಗಳನ್ನು ಸಾಲಗಾರರಾಗಿ ಇಟ್ಟಿದ್ದೀರಿ. ಬೇರೆ ಬೇರೆ ನೀರಾವರಿ ಯೋಜನೆಗಳಿಗೋಸ್ಕರ ಬಜೆಟ್‌ನಲ್ಲಿ ಇಲ್ಲದೆ ಇರುವ ಹಣವನ್ನು ಹಾಫ್ ಬಜೆಟ್ ಬಾರೋಯಿಂಗ್ಸ್‌ನಲ್ಲಿ ತೆಗೆದುಕೊಂಡಿದ್ದೀರಿ, ತೆಗೆದುಕೊಂಡು ಏನು ಮಾಡಿದ್ದೀರಿ ? ಹಣ ಹಂಚಿಕೆಯಾಗಿದೆ. ಯಾರ್ಯಾರಿಗೆ ಹಂಚಿಕೆಯಾಗಿದೆ ? ಆ ಇಲಾಖೆಯಿಂದ ಹಿಡಿದು ಸಂಬಂಧಪಟ್ಟ ಎಲ್ಲರಿಗೂ ಹಂಚಿಕೆಯಾಗಿದೆ. ಇದನ್ನು ನಾನು ಹೇಳಿದರೆ ಏನು ಹೇಳುತ್ತೀರಿ ? ಚುನಾವಣೆ ಹತ್ತಿರ ಬರುತ್ತಿದೆ, ವಿರೋಧ ಪಕ್ಷಗಳಿಗೆ ಏನೂ ಕೆಲಸ ಇಲ್ಲ ಎಂದು ಹೇಳುತ್ತೀರಿ. ನಾನು ಹೇಳಿಲ್ಲ. ಪ್ರಾಮಾಣಿಕವಾಗಿ ಕ್ಯಾಬಿನೆಟ್‌ನಲ್ಲಿ ಕೆಲಸ ಮಾಡುವ ಶ್ರೀಮತಿ ಮೋಟಮ್ಮನವರೇ ಹೇಳಿದ್ದಾರೆ. ಕರ್ನಾಟಕ ಜಲ ಮಂಡಳಿ ನೌಕರರು ಜಂಟಿ ಕ್ರಿಯಾಸಮಿತಿ ಇವೆಲ್ಲವನ್ನೂ ಬರೆದು ಚಿಕ್ಕಮಗಳೂರು ಕುಡಿಯುವ ನೀರು ಸರಬರಾಜು ಯೋಜನೆಯಲ್ಲಿ ಸುಮಾರು 1,30 ಕೋಟಿ ರೂಪಾಯಿಗಳ ಅವ್ಯವಹಾರವನ್ನು ಮಂಡಳಿಯ ವ್ಯವಸ್ಥಾಪಕ ನಿರ್ದೇಶಕರು ಎಸಗಿರುವುದು ಎಂದು ದೂರಿದ್ದಾರೆ, ಇದಕ್ಕೆ ಸಂಬಂಧಪಟ್ಟ ಹಾಗೆ ಅವರನ್ನು ಸಸ್ಪೆಂಡ್ ಮಾಡಿರುವುದು ಎಲ್ಲಾ ಪತ್ರಿಕೆಗಳಲ್ಲಿ ಇದೆ. ಟ್ರಾನ್ಸ್‌ಫರೆನ್ಸಿ ಆಕ್ಟ್ ಬಂದಿದ್ದು, ಟ್ರಾನ್ಸ್‌ಫರೆನ್ಸಿ ಆಕ್ಟ್ ಬಂದ ನಂತರವೂ ಕೂಡ ಇದಕ್ಕೆ ಸಂಬಂಧಪಟ್ಟ ಹಾಗೆ ಆಕ್ಷನ್ ತೆಗೆದುಕೊಳ್ಳಬೇಕೆಂದು ಪತ್ರವನ್ನು ಬರೆದಿರಿ, ತಾವು ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲಿ ವಯಲೇಷನ್ ಆಗಿದೆ ಎಂದು ಹೇಳಿ, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಹುಡ್ಕೋ ಯೋಜನೆ ಅಭಿವೃದ್ಧಿ ಕಾಮಗಾರಿಗಳಲ್ಲಿ 130 ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎಂದು ಸರ್ಕಾರದ ಉಪಕಾರ್ಯದರ್ಶಿಯವರು ನಗರಾಭಿವೃದ್ಧಿ ಇಲಾಖೆಗೆ ಬರೆದ ಪತ್ರ ಕೂಡ ನನ್ನ ಬಳಿ ಇದೇ ಹಾಫ್ ಬಜೆಟ್ ಬಾರೋಯಿಂಗ್ಸ್ ತಂದಿರಿ ಆ ಹಣ ಏನಾಯಿತು ; ಪಿಎಸಿ ಇಡೀ ದೇಶದಲ್ಲಯೇ ಬಹಳ ವ್ಯವಸ್ಥಿತವಾಗಿ , ಗೌರವ ಇರುವ ಕಮಿಟಿಯಾಗಿದ್ದು ಅದು ಇಂತಹ ಅವ್ಯವಹಾರಗಳ ಬಗ್ಗೆ ತನಿಖೆ ಮಾಡಿ ಯಾರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಾರೆ ಅವರಿಗೆ ಈ ರಾಜ್ಯ ಸರ್ಕಾರ ಕೊಟ್ಟಂತಹ ಬಳುವಳಿ ಏನು ? ಹಣವನ್ನು ವಸೂಲು ಮಾಡುವುದು ಅಲ್ಲ. ಯಾರು ಫೇಕ್ ಸಹಿ ಮಾಡಿ ಡಿಡಿ ತೆಗೆದುಕೊಂಡಿದ್ದರು, ಇಷ್ಟು ಮಾತ್ರ ಅಲ್ಲ, ಇದಕ್ಕೆ ಸಂಬಂಧಪಟ್ಟ ಹಾಗೆ ಸುಮಾರು 100 ಕೋಟಿ ರೂಪಾಯಿಗಳ ಅವ್ಯವಹಾರ ಈ ಇಲಾಖೆಯಲ್ಲಿ ನಡೆದಿದೆ. ದಾಖಲೆಗಳು ಇಷ್ಟು ಇವೆ, ಪಿಎಸಿ ವರದಿ ಕೊಟ್ಟಿತು ಎಸ್ಟಿಮೇಟ್ ಕಮಿಟಿ ವರದಿ ಕೊಟ್ಟಿತು, ನಾನು ಆಗಲೇ ಹೇಳಿದ ಹಾಗೆ, ಮಾನ್ಯ ಮಂತ್ರಿಗಳು ಶಾಸಕರಾಗಿದ್ದಾಗ ಪತ್ರ ಬರೆದರು. ಆದರೂ ಆದದ್ದೇನು ? ಎಲ್ಲಾ ಕೇಸುಗಳನ್ನು ಮುಚ್ಚಿಹಾಕಲಾಯಿತು. ಕೊಟ್ಟಂಥ ವರದಿ ಏನಾಯಿತು ? ಈ ಸದನದೊಳಗಡೆ ನಾವೇಕೆ ಕಂಪೋಷ್

ಮಾಡಿಕೊಳ್ಳಬೇಕು ? ನಿರಂತರವಾಗಿ ಹತ್ತು ಮೀಟಿಂಗ್‌ಗಳನ್ನು ಮಾಡಿ ಪಿ.ಎಸ್.ಸಿ ವರದಿ ಕೊಟ್ಟಿದ್ದು ಏನಾಯಿತು ? ಎಸ್ಟಿಮೇಟ್ ಕಮಿಟಿ ಕೊಟ್ಟಂಥ ವರದಿ ಏನಾಯಿತು ? ಅದಕ್ಕೆ ಬಳುವಳಿ ಇವೊತ್ತು ಯಾರು ಮ್ಯಾನೇಜಿಂಗ್ ಡೈರೆಕ್ಟರ್ ರಿಟೈರ್ ಆಗಿದ್ದರೋ ಅವರನ್ನು ಮತ್ತೆ ಎರಡು ವರ್ಷಗಳ ಕಾಲ ಮುಂದುವರಿಸುವಂಥ ಕೆಲಸವನ್ನು ಸರ್ಕಾರ ಮಾಡಿದೆ. ಭ್ರಷ್ಟಾಚಾರದಲ್ಲಿ ಮುಳುಗಿರುವ ಮತ್ತು ರಿಟೈರ್ ಆಗಿರುವ ಒಬ್ಬ ವ್ಯಕ್ತಿಯನ್ನು ಮತ್ತೆ ಎರಡು ವರ್ಷಗಳ ಕಾಲ ಕಂಟಿನ್ಯೂ ಮಾಡುವಂಥ ವ್ಯವಸ್ಥೆ ಮಾಡುವ ನಿರ್ಧಾರ ತೆಗೆದುಕೊಳ್ಳಬಹುದಾದರೆ ಬಜೆಟ್ ಏಕೆ ಬೇಕು ? ಅದರ ಮೇಲೆ ಶಿಸ್ತು ಎಲ್ಲಿದೆ ? ಆರ್ಥಿಕ ಶಿಸ್ತು. ಆರ್ಥಿಕ ಶಿಸ್ತು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹತ್ತು ಬಾರಿ ಕೇಳುತ್ತಾರೆ. ನಾನು ಇದೇ ಮೊದಲನೆಯ ಬಾರಿಗೆ ಮಧ್ಯಮಾವಧಿ ಆರ್ಥಿಕ ಯೋಜನೆಯಡಿಯಲ್ಲಿ ಆರ್ಥಿಕ ಶಿಸ್ತನ್ನು ತಂದಿದ್ದೇನೆ. ತಂದಿದ್ದೇನೆ, ತಂದಿದ್ದೇನೆ ಎಂದು ಹೇಳಿದ್ದಾರೆ. ಎಲ್ಲಿದೆ ಆರ್ಥಿಕ ಶಿಸ್ತು? ಯಾರು ಭ್ರಷ್ಟರಾಗಿದ್ದಾರೋ ಅವರು ಪಡೆದಂಥ ಹಣವನ್ನು ಹಂಚಿದರೆ ಸಾಕು, ಬೇರೆ ಬೇರೆ ಲಿವಲ್‌ಗಳಲ್ಲಿ ಅದು ಕೆಲಸವಾಗುತ್ತದೆ ಎನ್ನುವಂಥದ್ದು ಸರ್ಕಾರದ ವಿಚಾರ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ನಾನು ಬಯಸುವುದಿಲ್ಲ. ಕಾರಣ ರಾಜ್ಯದ ಬೊಕ್ಕಸ ಹೇಗೆ ಹೋಗುತ್ತಿದೆ ಎನ್ನುವಂಥಾದ್ದು ಬಹಳ ಮುಖ್ಯವಾದಂಥ ಅಂಶ. ಇದಕ್ಕೆ ರಾಜ್ಯದ ಜನತೆಗೆ ಹೇಗೆ ಉತ್ತರವನ್ನು ಹೇಳುತ್ತೀರೋ ಅದನ್ನು ಹೇಳಿ. ಇನ್ನೊಂದು ಮಹಾ ಸಂಸ್ಥೆ. ಆಗಲೇ ಬೆಳಿಗ್ಗೆ ಚೆನ್ನಿಗಪ್ಪನವರು ಮಾತನಾಡುವಾಗ ಹೇಳಿದರು. ಎಸ್ಕಾಂ, ಬಿಸ್ಕಾಂ, ಮೆಸ್ಕಾಂ. ಹೌದು; ಸುಧಾರಣೆಯ ವಿಚಾರ ಬಂದಾಗ ನಾವು ಅದನ್ನು ಸ್ವಾಗತ ಮಾಡಿದೆವು. ಹಿಂದಿನ ಕೆ.ಇ.ಬಿ.ಯನ್ನು ಕೆ.ಪಿ.ಟಿ.ಸಿ.ಎಲ್. ಎಂದು ಮಾಡಿದಿರಿ. ಕೆ.ಪಿ.ಟಿ.ಸಿ.ಎಲ್.ನ್ನು ನಾಲ್ಕು ಭಾಗವಾಗಿ ಮಾಡಿದಿರಿ. ಟ್ರಾನ್ಸ್‌ಮಿಶನ್ ಮತ್ತು ಡಿಸ್ಟಿಬ್ಯೂಶನ್ನನ್ನು ಬೇರೆ ಬೇರೆ ಮಾಡಿಟ್ಟಿರಿ. ಇಷ್ಟು ಮಾತ್ರವಲ್ಲ, ವರ್ಲ್ಡ್ ಬ್ಯಾಂಕ್ ವಿಚಾರ ಬಂದಾಗ ಒಂದು ಮಾತನ್ನು ಹೇಳುತ್ತೇನೆ. ಈ ವರ್ಷ ರಾಜ್ಯದ ಮುಖ್ಯಮಂತ್ರಿಗಳು 12 ಸಾವಿರ ಕೋಟಿ ರೂಪಾಯಿ ಸಾಲಕೋಸ್ಕರವಾಗಿ ವಿಶ್ವಬ್ಯಾಂಕ್‌ಗೆ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ 61/2 ಸಾವಿರ ಕೋಟಿ ರೂಪಾಯಿಗಳು ಕೆ.ಪಿ.ಟಿ.ಸಿ.ಎಲ್ ಗೋಸ್ಕರ. ಅದೂ ಒಂದು ಸಂಸ್ಥೆ. ಕೆ.ಪಿ.ಟಿ.ಸಿ.ಎಲ್.ನ್ನು ಈ ಬಾರಿ ಬಹಳ ಸಂತೋಷದಿಂದ ನಮ್ಮ ಸ್ನೇಹಿತರು ಬಂಚ್ ಕುಟ್ಟಿ ಸ್ವಾಗತ ಮಾಡಿದರು. ಏಕೆಂದರೆ ವಲಯವಾರು ಯೋಜನಾ ವೆಚ್ಚ 2004–2005 ರಲ್ಲಿ ಇಂಧನ ಇಲಾಖೆಗೆ 2608.76 ಕೋಟಿ ರೂಪಾಯಿಗಳು, ಅಂದರೆ ಹಿಂದಿನ ವರ್ಷಕ್ಕಿಂತ 23.92 ಪರ್ಸೆಂಟ್ ಹೆಚ್ಚು ನಮ್ಮ ಬಜೆಟ್‌ನಲ್ಲಿ ಕೊಟ್ಟಿದ್ದೇವೆ ಎಂದು ಹೇಳಿ ಸ್ವಾಗತವನ್ನು ಮಾಡಿದರು. ಹೌದು ಸ್ವಾಗತವನ್ನು ನಾನೂ ಮಾಡುತ್ತೇನೆ. ಆದರೆ ಏತಕೋಸ್ಕರವಾಗಿ ಕೊಟ್ಟಿದ್ದೀರಿ ಎಂಬುದು ಜನತೆ ಮುಂದೆ ಬೇಕು. 880 ಕೋಟಿ ರೂಪಾಯಿಗಳ ಪ್ಯಾಕೇಜ್‌ನ್ನು ರೈತರಿಗೆ ಕೊಟ್ಟಾಗ ಅದರಲ್ಲಿ ನೀವು ಏನು ಹೇಳಿದ್ದೀರಿ ? ಈಗಾಗಲೇ ರೈತರು ಪಂಪ್‌ಸೆಟ್‌ಗೆ ಸಾಲ ಪಡೆದು ಏನು ಬಡ್ಡಿ ಕಟ್ಟಬೇಕಾಗಿತ್ತೋ ಅದನ್ನು ಮನ್ನಾ ಮಾಡಿದ್ದೇವೆಂದು ಹೇಳಿ ಅದರಲ್ಲಿ 330 ಕೋಟಿ ರೂಪಾಯಿಗಳನ್ನು ತೋರಿಸಲಾಗಿತ್ತು. ಹಾಗಾದರೆ ಈ 2900 ಕೋಟಿ ರೂಪಾಯಿಗಳು ಏಕೆ ? ರಾಜ್ಯದ ವ್ಯವಸ್ಥೆಯನ್ನು ಸರಿ ಮಾಡುವುಕ್ಕಲ್ಲ ಅಧ್ಯಕ್ಷರೇ ಕಾರಣ ಈಗಾಗಲೇ ಎಕ್ಸ್‌ಲರೇಟಿಡ್ ಪವರ್ ಡೆವಲಪ್‌ಮೆಂಟ್‌ಗೋಸ್ಕರವಾಗಿ ರಾಜ್ಯಕ್ಕೆ 1400 ಕೋಟಿ ರೂಪಾಯಿಗಳು ಈಗಾಗಲೇ ಕೇಂದ್ರ ಸರ್ಕಾರದಿಂದ ಬಂದಿದೆ. ಅದನ್ನು ನೀವು ಉಪಯೋಗ ಮಾಡಲಿಲ್ಲ. ಕೇವಲ 400 ಕೋಟಿ ರೂಪಾಯಿಗಳನ್ನು ಮಾತ್ರ ಉಪಯೋಗಿಸುವಂಥ ವ್ಯವಸ್ಥೆ ಆಯಿತು. ಅದು ಪೂರ್ತಿ ಸಾಲವಲ್ಲ, ಎಂಬತ್ತು ಪರ್ಸೆಂಟ್ ಸಬ್ಸಿಡಿ ಇತ್ತು. ಏಕೆ ಉಪಯೋಗ ಮಾಡಲಿಲ್ಲ ? ಏಕೆ

ಮಾಡಲಿಲ್ಲವೆಂದರೆ ಎ.ಪಿ.ಡಿ.ಪಿ. ಪ್ರೋಗ್ರಾಂನಲ್ಲಿ ಟ್ರಾನ್ಸ್‌ಫರೆನ್ಸಿ ಆ್ಯಕ್ಟ್‌ನ್ನು ಬಿಟ್ಟು ಕಳಪೆಯ ಕಂಡಕ್ಟರ್ ಮತ್ತು ಕಳಪೆಯ ಟ್ರಾನ್ಸ್‌ಫಾಮರ್ಸ್ ಇವುಗಳೆಲ್ಲವನ್ನೂ ಹಾಕಿ ಒಂದು ದೊಡ್ಡ ಅವ್ಯವಹಾರವಾಗಿದೆ ಎಂದು ಹೇಳಿ ಶ್ರೀ ರಾಮದಾಸ್ ಅವರು ಸದನದಲ್ಲಿ ಹೇಳಿದರೆ ಅದು ವಿರೋಧ ಪಕ್ಷವಾಗುತ್ತದೆ. ನಾನು ಹೇಳಿರುವುದಿಲ್ಲ. ನಿಮ್ಮದೇ ತನಿಖಾ ತಂಡ ಹೋಗಿ ಇವೊತ್ತು ನೋಡಿದ್ದಾರೆ. ಈಗಾಗಲೇ ತಾವು ಕ.ವಿ.ಕಾ.ಗೆ ಕೊಟ್ಟಂಥ ಕಾಮಗಾರಿ ಏನಿತ್ತು ಅದನ್ನು ಸಬ್‌ಲಿಟ್ಟ ಮಾಡಿ ರಾಜ್ಯದ ಮಂತ್ರಿಗಳ ಸಂಬಂಧಿಗಳಿಗೆ ಇವೆಲ್ಲವನ್ನೂ ಕೂಡ ಕೊಟ್ಟು ದೊಡ್ಡ ಅವ್ಯವಹಾರವಾಗಿದೆ ಎಂದು ರಿಪೋರ್ಟ್ ಬಂದಿದೆಯಲ್ಲಾ ಅದನ್ನು ಸದನದ ಮುಂದೆ ಇಡಿ. ಇದೆಲ್ಲಾ ಲೆಕ್ಕವಿಲ್ಲ ಅಲ್ಲವೇ ? 1400 ಕೋಟಿ ರೂಪಾಯಿ ರಿಯಲೈಸೇಶನ್ ಎಲ್ಲಿಂದ ಆಗುತ್ತದೆ ? ಹಳೆಯ ಕಾಮಗಾರಿಗಳು ಸರಿಯಾಗಿ ಆಗಿಲ್ಲವೆಂದು ಹೇಳಿ ಇವೊತ್ತು ಎ.ಪಿ.ಡಿ.ಪಿ ಪ್ರೋಗ್ರಾಂನಲ್ಲಿ ನಮ್ಮ ಮುಂದೆ ಹಣ ಬರುವುದಕ್ಕೆ ಆಗಲಿಲ್ಲ. 2608 ಕೋಟಿ ರೂಪಾಯಿಗಳು ಇಂಧನ ಇಲಾಖೆಗೆ ಬಂತಲ್ಲಾ, ಏಕೆ ಬಂತು ? ಯಾರಿಗೋಸ್ಕರವಾಗಿ ? ರಾಜ್ಯದ ಮುಖ್ಯಮಂತ್ರಿಗಳು ಹೇಳುವಾಗ ಹೇಳಿದರು. ನನಗೆ ತಣ್ಣೀರುಬಾವಿ ಬೀಸಿನೀರ ಬಾವಿ ಆಗಿದೆ ಎಂದು ಹೇಳಿದರು. ಅದು ಫ್ಯಾಕ್ಟ್. ಅದು ನಿಜ. ಏಕೆಂದರೆ ಇವೊತ್ತು ಈ ಇಂಧನ ವ್ಯವಸ್ಥೆಗಳನ್ನು ಸರಿ ಮಾಡುವುದಕ್ಕೋಸ್ಕರವಾಗಿ ಕೊಟ್ಟಂಥ ಹಣವೇನಿತ್ತು ಇದು ಈ ರಾಜ್ಯದ ಬೊಕ್ಕಸವನ್ನು ಹಾಳು ಮಾಡುವುದಕ್ಕೋಸ್ಕರವಾಗಿ ಇರುವಂಥ ಇಲಾಖೆಗೆ ಕೊಟ್ಟಂಥ ಹಣ. ಇದರ ಜೊತೆಯಲ್ಲಿ ನಿಮ್ಮ ಸಾಧನೆ ಏನು ? ಕಳೆದ ನಾಲ್ಕು ವರ್ಷಗಳಲ್ಲಿ ಅದಕ್ಕಿಂತ ಹಿಂದೆ ಬಂದಂಥ ಎಲ್ಲಾ ಸರ್ಕಾರಗಳಿಗೂ ಹೋಲಿಕೆ ಮಾಡಿಕೊಂಡಾಗ 35.6 ಪರ್ಸೆಂಟ್ ಟ್ಯಾರಿಫ್ ಹೈಕ್ ಮಾಡಿದ್ದೀರಿ.

ಶ್ರೀ ಕೆ.ಹೆಚ್.ರಂಗನಾಥ್ : ಟ್ಯಾರಿಫ್ ಹಿಂದಿನಿಂದಲೂ ಹೈಕ್ ಮಾಡಿಕೊಂಡು ಬರಲಾಗಿದೆ.

ಶ್ರೀ ಎ.ರಾಮದಾಸ್ : ಹೌದು ಸಾರ್. ಈಗ ಎನಾದರೂ ಅದಕ್ಕೆ ಮಾಡಬೇಕಲ್ಲವೇ ? ಅದಕ್ಕೆ ಇಷ್ಟೊಂದು ಸಾಲವೇ ? ಅದಕ್ಕೇ ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್.ರಂಗನಾಥ್ : ಕೇಂದ್ರ ಸರ್ಕಾರ ಎಷ್ಟು ಸಾಲ ಮಾಡಿದೆ ಹೇಳಿ.

ಶ್ರೀ ಎ.ರಾಮದಾಸ್ : ಅದನ್ನೂ ಹೇಳುತ್ತೇನೆ. ಕೇಂದ್ರ ಸರ್ಕಾರದಿಂದ ಕಳೆದ ಐದು ವರ್ಷಗಳ ಹಿಂದೆ ಇದ್ದಂಥ ಸಾಲ 7 ಲಕ್ಷದ 80 ಸಾವಿರ ಕೋಟಿ ರೂಪಾಯಿಗಳು. ಆದರೆ ಇವೊತ್ತು ಆ ಸಾಲವನ್ನು ತೀರಿಸಿ ಐ.ಎಂ.ಎಫ್.ಗೆ 10 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ನಾವು ಕೊಟ್ಟಿದ್ದೇವೆ. ಸದನದೊಳಗಡೆ ಅಥಾರಿಟೇಟಿವ ಆಗಿ ಹೇಳುತ್ತಿದ್ದೇನೆ. ನಮ್ಮ ಸಾಲ ಕಳೆದ 5 ವರ್ಷಗಳ ಹಿಂದೆ 7 ಲಕ್ಷ ಕೋಟಿ ರೂಪಾಯಿಗಳು ಇತ್ತು.

ಶ್ರೀ ಕೆ.ಹೆಚ್.ರಂಗನಾಥ್ : ಮತ್ತೆ ಬಜೆಟ್ ಏಕೆ ಮಂಡನೆ ಮಾಡಲಿಲ್ಲ ?

ಶ್ರೀ ಎ.ರಾಮದಾಸ್ : ಮಾಡಿದ್ದೇವೆ ಸಾರ್. ನಾವು ಪ್ರಾಮಾಣಿಕರು. ನಮ್ಮ ಸರ್ಕಾರವನ್ನು ಮುಂದೆ ಡಿಸಾಲ್ವ್ ಮಾಡುತ್ತಿದ್ದೇವೆ. ಪೂರ್ಣ ಬಜೆಟ್ ಕೊಡಬಾರದು, ಜನಗಳಿಗೆ ಮೋಸ ಮಾಡಬಾರದು, ಅವರಿಗೆ ಏನೇನೋ ಸ್ಕೀಂಗಳನ್ನು ಕೊಡಬಾರದು ಎಂದು ಹೇಳಿಯೇ ಕೇವಲ ಓಟ್ ಆನ್ ಅಕೌಂಟ್ ಕೊಟ್ಟೆವು. ಆದರೆ ಹಿರಿಯರಾದ ತಾವು ಈ ರೀತಿ ರಾಜ್ಯಕ್ಕೆ ಮೋಸ ಮಾಡಬಾರದಿತ್ತು. I never expected ಹೀಗೆ ಪೂರ್ಣ ಪ್ರಮಾಣದ ಬಜೆಟ್‌ನ್ನು ಕೊಟ್ಟು ನೀವು ಮತ್ತೆ ಚುನಾವಣೆಗೆ ಹೋಗುವ ವ್ಯವಸ್ಥೆಯನ್ನು ನೋಡಿದಾಗ ಅದು ಕನ್ನಡಿಯೊಳಗಿನ ಗಂಟನ್ನು ತಾವು ತೋರಿಸಿದಂತಾಗುತ್ತದೆ. ನಿಮ್ಮಂಥ ಹಿರಿಯರಿಂದ ಇದನ್ನು ನಾನು ಎಕ್ಸ್‌ಪೆಕ್ಟ್ ಮಾಡಿರಲಿಲ್ಲ.

ಯಾರೇ ಆಗಿರಲಿ, ಫೈನಾನ್ಸ್ ಬಗ್ಗೆ ವಿಚಾರ ಮಾಡಿದಾಗ ಎಲ್ಲಿ ಡೆವಲಪ್‌ಮೆಂಟ್ ಆಗಿದೆಯೋ ಅದಕ್ಕೆ ನಾನು ನಿಜವಾಗಿ ಅಪ್ರೀಶಿಯಟ್ ಮಾಡುತ್ತೇನೆ. ಅದರ ಬಗ್ಗೆ ನಿಮ್ಮ ಇಲಾಖೆಯ ವಿಚಾರ ಬಂದಾಗ ನಾನು ಬೇಳುತ್ತೇನೆ. ಎಷ್ಟೆಷ್ಟು ಅಡ್ಮಿನಿಸ್ಟೇಟಿವ್ ಖರ್ಚು ಕಡಿಮೆ ಮಾಡಿದ್ದೀರಿ ? ಒಳ್ಳೆಯದು ಎಲ್ಲಾಗಿದೆ, ಕೆಟ್ಟದ್ದು ಏನಾಗಿದೆ ಎಂಬ ಬಗ್ಗೆ ನಾನು ಹೇಳುತ್ತೇನೆ. ಆದರೆ ಇವೊತ್ತು ಪವರ್ ರಿಫಾರ್ಮ್‌ನಲ್ಲಿ ಬಂದಂಥ 1400 ಕೋಟಿ ರೂಪಾಯಿಗಳು ಹಣ ಏನಾಯಿತು ? ಮೀಟರ್ ಸ್ಕ್ಯಾಮ್ ಬಗ್ಗೆ ಇಲ್ಲೀ ನಾವು ಹೇಳಿದೆವು. 780 ಕೋಟಿ ರೂಪಾಯಿಗಳ ಹಗರಣ ಏನಾಯಿತು ? ಇವೊತ್ತಿಗೂ ಅದರ ಬಗ್ಗೆ ಗೊತ್ತಿಲ್ಲ. ಸಾಲ ಮಾತ್ರ ನಮ್ಮ ತಲೆಯ ಮೇಲಿದೆ. ಕೆ.ಪಿ.ಟಿ.ಸಿ.ಎಲ್. ಬಗೆಗಿನ ಕರ್ಮಕಾಂಡವನ್ನು ಹೇಳುತ್ತಾ ಹೋದರೆ ಬಹಳ ನೋವಿನ ಸಂಗತಿಯಾಗುತ್ತದೆ. ಆದರೆ ಇವೊತ್ತು ವಿಶೇಷವಾಗಿ ಐ.ಪಿ.ಪಿ.ಗಳಿಗೆ ಅದರಲ್ಲೂ ತಣ್ಣೀರುಬಾವಿ ಪವರ್ ಪ್ರಾಜೆಕ್ಟ್‌ಗೆ ಎಸ್ಕ್ರೋ ಇನ್‌ವೋಕ್ ಮಾಡಲಿಕ್ಕೋಸ್ಕರವಾಗಿ ತಾವು 480 ಕೋಟಿ ರೂಪಾಯಿಗಳನ್ನು ಇವೊತ್ತು ಎಸ್ಕ್ರೋ ಇನ್‌ವೋಕ್‌ಗೋಸ್ಕರವಾಗಿ ಕೊಡಬೇಕಾಗಿತ್ತು. ಅದನ್ನು ಯಾರು ಕೊಡುತ್ತಾರೆ ? ಜನಗಳ ಮೇಲಿ ಹೊರೆ ಹಾಕಬೇಕಾಗಿತ್ತು. ಇವರು ಕೆ.ಇ.ಆರ್.ಸಿ. ಮುಂದೆ ಕ್ಯಾರಿಫ್ ಆರ್ಡರ್‌ನ್ನು ಫೈಲ್ ಮಾಡಿದರು ಅಲ್ಲಿ ನಾವು ಅಬ್ಜಿಕ್ಷನ್ ಹಾಕಿದೆವು. ಕೆ.ಇ.ಆರ್.ಸಿ.ಯಲ್ಲಿ ತಣ್ಣೀರುಬಾವಿಗೆ ಕೊಡಬಾರದು ಎಂದು ಆರ್ಡರ್ ಆಯಿತು. ಅದಕ್ಕೆ ಇವರೇನು ಮಾಡಿದರೆಂದರೆ ರಾಜ್ಯದ ಬಜೆಟ್‌ನಲ್ಲಿ ಹಣವನ್ನು ಕೊಟ್ಟು ತಣ್ಣೀರಬಾವಿಗೆ ಇನ್‌ಡೈರೆಕ್ಟಾಗಿ ಹಣವನ್ನು ಕೊಡುವಂಥ ಕೆಲಸವನ್ನು ಮಾಡಿದ್ದೀರಲ್ಲಾ ರಾಜ್ಯದ ಬೊಕ್ಕಸ ಏನಾಗಬೇಕು ? ಯಾರು ಇದಕ್ಕೆ ಜವಾಬ್ದಾರಿ ? ಹೀಗೆ ಹಗಲುದರೋಡೆ ಇವೊತ್ತು ಪವರ್ ಸೆಕ್ಟರ್‌ನಲ್ಲಿ ಆಗುತ್ತಿದೆ ಎಂದು ಬಹಳ ನೋವಿನಿಂದ ಹೇಳಬೇಕಾಗಿದೆ. ಆದ್ದರಿಂದ ಯಾವುದರಿಂದ ಈ ಹಣವನ್ನು ಕೊಟ್ಟಿದ್ದೀರಿ ಎನ್ನುವ ಪ್ರಶ್ನೆ ನನ್ನ ಮುಂದೆ ಇದೆ. ನಮ್ಮಮ ಅತಿ ಜಾಸ್ತಿ ಟ್ಯಾಕ್ಸ್‌ನ್ನು ಕೊಡುವಂಥ ರಾಜ್ಯವೆಂದು ಸನ್ಮಾನ್ಯ ಸಚಿವರು ಹೇಳಿದರು. 1997–98ರಲ್ಲಿ ನಮ್ಮ ರಾಜ್ಯದ ಆದಾಯದ ಹಣದಲ್ಲಿ 53 ಪರ್ಸೆಂಟನ್ನು ಗ್ಯಾರೆಂಟೆಡ್ ಹಣ ಎಂದು ಕೊಟ್ಟು ನಾವು ಸಾಲವನ್ನು ಪಡೆಯುತ್ತಿದ್ದೆವು. ರಾಜ್ಯದ ಮುಖ್ಯಮಂತ್ರಿಗಳ ಸಾಧನೆ 2001–02ರಲ್ಲಿ ನಮ್ಮ ಆದಾಯದಲ್ಲಿ ಪರ್ಸಂಟನ್ನು ಫ್ಲೆಡ್ಜ್ ಮಾಡಲಾಗಿದೆ. ಆದೇ ರೀತಿ 2002–03ರಲ್ಲಿ 87 ಪರ್ಸೆಂಟ್ ನಮ್ಮ ಆದಾಯದ 80 ಪರ್ಸೆಂಟನ್ನು ನಮ್ಮ ಆದಾಯವನ್ನು ಫ್ಲೆಡ್ಜ್ ಮಾಡಿ ಹಣವನ್ನು ತೆಗೆದುಕೊಂಡಿದ್ದೇವೆ. ಅಂದರೆ ಈ ಒಂದು ವ್ಯವಸ್ಥೆಯನ್ನು ಮಾಡಿದವರು ಯಾರು ? ಇನ್ನೂ ನಮ್ಮ ಆದಾಯ ಬರುತ್ತದೆ ಎನ್ನುವ ನಿರೀಕ್ಷಣೆಯಲ್ಲಿ ಅದನ್ನು ಫ್ಲೆಡ್ಜ್ ಮಾಡಿ ಹಣವನ್ನು ತೆಗೆದುಕೊಳ್ಳುವಂಥ ಪರಿಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣವಾಗಿದೆ ಎನ್ನುವುದಾದರೆ ಎಷ್ಟು ನೋವಿನ ಸಂಗತಿ, ನೀವೇ ನೋಡಿ. ಇವೊತ್ತು ಒಂದು ರಾಜ್ಯದ ಅರ್ಥ ವ್ಯವಸ್ಥೆ ಸರಿಯಾಗಿದೆ ಎಂದು ಹೇಳಬೇಕಾದರೆ ಬಿನಿಫಿಟ್ ಕಾಸ್ಟ್ ರೇಶಿಯೋ ಹೇಗಿದೆ ಎಂದು ನೋಡಬೇಕಾಗುತ್ತದೆ. 1997–98ರಲ್ಲಿ ಅದು 1842 ಕೋಟಿ ರೂ.ಇತ್ತು. ಈಗ 2001–02ರಲ್ಲಿ ಅದು 879 ಕೋಟಿ ರೂ. ಆಯಿತು. ಅಂದರೆ ನಮ್ಮ ರಾಜ್ಯದ ವ್ಯವಸ್ಥೆ ಯಾವ ರೀತಿಯಾಗಿ ಅಧೋಗತಿಗೆ ಇಳಿಯುತ್ತಿದೆ ಎನ್ನುವಂಥದ್ದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಮುಂದೆ ಇರುವಂಥ ಲಯಬಿಟೀಸ್ ಬಗ್ಗೆ ಹೇಳಬೇಕೆಂದರೆ ರಾಜ್ಯದ ಸಾಲ ಎಷ್ಟು ? ಹೇಳಿದರೆ ಮಾನ್ಯ ರಂಗನಾಥ್‌ರವು ಬೇಸರ ಮಾಡಿಕೊಳ್ಳುತ್ತಾರೆ ಎಂದುಕೊಳ್ಳುತ್ತೇನೆ. ಆದರೂ ಹೇಳಲೇ ಬೇಕಾದ ಅವಶ್ಯಕತೆ ಇದೆ. ತಮ್ಮ ಮುಂದೆ ಒಂದು ಪ್ರಮುಖವಾದ ಅಂಶವನ್ನು ಹೇಳಬೇಕಾದ ಅವಶ್ಯಕತೆ ನನಗಿದೆ ಅಂದರೆ ರಾಜ್ಯದ ಇವೊತ್ತಿನ ಸಾಲವೆಷ್ಟು ?

5.00 ಪಿ.ಎಂ.

ಇವತ್ತಿನ ಸಾಲ ಎಂದರೆ ಒಪ್ಪಿಕೊಳ್ಳುತ್ತೇನೆ. ಅಷ್ಟು ಸಾಲವನ್ನು ಈ ಸರ್ಕಾರದ ಮೇಲೆ ಬಿಟ್ಟು ಹೋಗಿದ್ದರು. ಆದರೆ ದಿ: 31.3.2002ರಲ್ಲಿ 15 ಸಾವಿರ ಕೋಟಿ ರೂಪಾಯಿಗಳು ಅಂದರೆ ಹಿಂದಿನ ಸರ್ಕಾರ ನಿಮಗೆ 12.50 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಬಿಟ್ಟು ಹೋಗಿದ್ದರು. ಆದರೆ ದಿ:31.3.2003ಕ್ಕೆ ನಿಮ್ಮ ಸಾಲ 26,169 ಕೋಟಿ ರೂಪಾಯಿಗಳು ಆದರೆ ಇದರಲ್ಲಿ ಕೇವಲ ಇಂಟರ್‌ನಲ್ ಡೇಟ್ ಮಾತ್ರ. ಎಕ್ಸ್‌ಟರೆನಲ್ ಡೇಟ್ ಮತ್ತು ಗ್ಯಾರಂಟೀಡ್ ತಾವು ಕೊಟ್ಟಿರುವುದು. ತಾವು ಇಂಟರ್‌ನಲ್ ಆಗಿ ಮಾರುಕಟ್ಟೆಯಲ್ಲಿ ಎತ್ತಿರುವಂತಹ ಸಾಲ 7 ಸಾವಿರ ಕೋಟಿ ರೂಪಾಯಿಗಳು, ಎಲ್‌ಐಸಿಯಿಂದ 660 ಕೋಟಿ ರೂಪಾಯಿಗಳು ನಬಾರ್ಡ್ ಯೋಜನೆಯಲ್ಲಿ 770 ಕೋಟಿ ರೂಪಾಯಿಗಳು ಸಣ್ಣ ಉಳಿತಾಯದ ಸಾಲ 5.436 ಕೋಟಿ ರೂಪಾಯಿಗಳು ಕೇಂದ್ರ, ಸರ್ಕಾರದ ಸಾಲ 12086 ಕೋಟಿ ರೂಪಾಯಿಗಳು ಇಷ್ಟಲ್ಲದೆ, ಪ್ರಸ್ತುತ ಸಾಲಿನಲ್ಲಿ ಗ್ಯಾರಂಟೇಡ್ ಅಮೌಂಟ್ ರಾಜ್ಯ ಸರ್ಕಾರ ಖಾತ್ರಿ ಕೊಟ್ಟಿರುವುದು ನಾನು ಆಗಲೇ ಹೇಳಿದೆ, 87 ಪರ್ಸೆಂಟ್ ನಮ್ಮ ಅದಾಯವನ್ನು ಖಾತ್ರಿ ಕೊಟ್ಟು ಸಾಲವನ್ನು ಪಡೆಯುವಂತಹ ಕೆಲಸವನ್ನು ಮಾಡಿದ್ದೀರಿ. ಅದು ಇಲ್ಲಿಯವರೆಗೆ 20,823.48 ಕೋಟಿ ರೂಪಾಯಿಗಳು ಅಂದರೆ ಇಂಟರ್‌ನಲ್ ಡೇಟ್ ಎಕ್ಸ್‌ಟರೆನಲ್ ಮತ್ತು ....

ಶ್ರೀ ಕೆ.ಹೆಚ್.ರಂಗನಾಥ್ : ನೀವು ಮುಂದಿನ ಸಲ ಮಂತ್ರಿಯಾದರೆ ಆಗ ಏನು ಎಂಬುದು ಗೊತ್ತಾಗುತ್ತದೆ. ಮಾನ್ಯ ಸೋಮಶೇಖರ್ ಅವರನ್ನು ಅಲ್ಲಿ ಕರೆದು ಕೇಳಿದ್ದರೆ ಸರ್ಕಾರ ಸಾಲ ಮಾಡುವುದಕ್ಕೆ ಗ್ಯಾರಂಟಿ ಕೊಡುತ್ತಾರೆ ಎನ್ನುವುದನ್ನು ಅವರು ಹೇಳುತ್ತಿದ್ದರು.

ಶ್ರೀ ಎ.ರಾಮದಾಸ್ : ಸರ್ಕಾರ ಕೊಟ್ಟಿರುವುದು ಇದೆ, ಇಲ್ಲಿ ತೋರಿಸುತ್ತಿದ್ದೇನೆ. ಇದು ನನ್ನ ಪ್ರಶ್ನೆಯಲ್ಲಿ ಸನ್ಮಾನ್ಯ ಅಧ್ಯಕ್ಷರು, ಮಾನ್ಯ ಸದಸ್ಯರ ಮೂಲಕವಾಗಿ ನಿಮ್ಮ ಮಂತ್ರಿಗಳನ್ನು ಕೇಳಿದಾಗ ಅದಕ್ಕೆ ನಿಮ್ಮವರೇ ಉತ್ತರ ಕೊಟ್ಟಿದ್ದಾರೆ. ದಿ: 13.1.2004ರಲ್ಲಿ ಪ್ರಶ್ನೆ ಸಂಖ್ಯೆ : 893 ಬಂದಿದೆ. ನಾನು ಏನು ಕೇಳುತ್ತಿದ್ದೇನೆ ಅಂದರೆ ರಾಜ್ಯಕ್ಕೆ ಗ್ಯಾರಂಟಿ ಕೊಟ್ಟಂತಹ ಹಣ ಎಷ್ಟು ?

ಶ್ರೀ ಕೆ.ಹೆಚ್.ರಂಗನಾಥ್ : ನೀವು ಯಾವಾಗಲಾದರೂ ಒಂದು ಸಾರಿ ಮಂತ್ರಿಯಾದರೆ; ಅಗುವುದೇ ಇಲ್ಲ ಬಿಡಿ. ನೀವು ಮಾತನಾಡುವುದಕ್ಕೆ ಇರುವುದು. ಮಾನ್ಯ ಸೋಮಶೇಖರ್ ಬರುತ್ತಾರೆ, ಇಲ್ಲಿ ಅಲ್ಲಿ ಎಕ್ಸ್‌ಚೇಂಜ್ ಆಗುವುದು ಅಷ್ಟೆ. ಆದರೆ ಅವರು ಬರೀ ದಳ ಉದುರಿ ಹೋದ ಹಾಗೆ ಆದರು ಅದು ಸರ್ಕಾರ ಮಾಡಿರುವ ಸಾಲ ಅಲ್ಲ.

ಶ್ರೀ ಚಂದ್ರ ಕಾರತ್ ಜಿ. ಬೆಳ್ಳದೆ : ನೀವು ಹೇಳಿದಿರಿ ಮುಂದಿನ ಸಲ ಮಂತ್ರಿಯಾದರೆ ಎಂದು.

ಶ್ರೀ ಕೆ.ಹೆಚ್.ರಂಗನಾಥ್ : ನೀವು ಇರಬೇಕೆಂದು ಪೇಜಾವರ ಸ್ವಾಮಿಗಳು ಹೇಳಿ ಹೋಗಿದ್ದಾರೆ. ಅದು ಆದಮೇಲೆ ನೀವೆಲ್ಲಾ ಸುಸ್ತು ಆಗಿದ್ದೀರಿ. ಇದು ಮಾನ್ಯ ರಾಮದಾಸ್ ಅವರಿಗೆ ಗೊತ್ತಿದೆ.

ಶ್ರೀ ಎ. ರಾಮದಾಸ್ : ರಾಜ್ಯವನ್ನು ಸಾಲಗಾರ ರಾಜ್ಯವನ್ನಾಗಿ ಬಿಟ್ಟು ಹೋಗುತ್ತಿದ್ದೀರಿ. ಅದಕ್ಕೆ ಉತ್ತರವಾಗಿ ಬಂದು ಬಳುವಳಿ ಕೊಡುತ್ತಿದ್ದಾರೆ. ಅದು ನಮಗೂ ಗೊತ್ತಿದೆ. ಆದರೆ ತಾವೇ ಕೊಟ್ಟಿರುವಂತಹ ರಾಜ್ಯ ಸರ್ಕಾರದ ಖಾತರಿ ಅಂದರೆ ಗ್ಯಾರಂಟಿ ನೀಡಿರುವ ಸಾಲದ ಪ್ರಮಾಣ ದಿ : 31.3.2002ಕ್ಕೆ. ಅಂತ್ಯವಾಗುವ ಹಾಗೆ 20,823 ಕೋಟಿ ರೂಪಾಯಿಗಳು ಒಂದು ಮಾತನ್ನು ನೀವು ಹೇಳಿದಿರಿ, ಅದನ್ನು ಒಪ್ಪಿಕಕೊಳ್ಳುತ್ತೇನೆ. ಇಲ್ಲಿ ರಿಪೋರ್ಟ್ ನನ್ನ ಮುಂದೆ ಇದೆ. ಇದರಲ್ಲಿ 2001-

02ರಲ್ಲಿ ನೀವು ಗ್ಯಾರಂಟಿ ಕೊಟ್ಟಿದ್ದೀರಿ ಎಂದು ಹೇಳಿ. ಆ ಕಂಪನಿ ಕೊಟ್ಟಿಲ್ಲವೆಂದು ಹೇಳಿ ಸರ್ಕಾರದ ಮೇಲೆ ದಾವೆ ಹಾಕಿ 8.3 ಕೋಟಿ ರೂಪಾಯಿಗಳನ್ನು ರಿಯಲೈಸೇಷನ್ ಮಾಡಿಕೊಂಡಿದ್ದಾರೆ. ಅದು ರಿಯಲೈಸೇಷನ್ ಆಗಿದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರ ನಮಗೆ ಸ್ಪಂದಿಸುತ್ತಿಲ್ಲವೆಂದು ಹೇಳಿದರು. ಸ್ಪಂದಿಸದೆ ಹೋದರೂ ಕೂಡ ಕೇಂದ್ರ ಸರ್ಕಾರವನ್ನು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಕೇಳುವಂತಹ ಅವಶ್ಯಕತೆ ಇರುತ್ತದೆ. ಆದರೆ ಹೇಳುವಂತಹ ಮಾತನ್ನು ಸತ್ಯಕ್ಕೆ ಹತ್ತಿರವಾಗುವ ಹಾಗೆ ಹೇಳಬೇಕಲ್ಲಾ ಕೇವಲ ಚುನಾವಣೆಗೋಸ್ಕರ ರಾಜಕಾರಣಕೋಸ್ಕರ ಹೇಳಬಾರದಲ್ಲವೇ ? ಅಲ್ಲಾ ರಾಜ್ಯದ ಮುಖ್ಯಮಂತ್ರಿಗಳು. ಇವತ್ತು 2003ರ ಸಿಎಜಿ ವರದಿ ಇದೆ. ನಮ್ಮ ಕೇಂದ್ರ ಸರ್ಕಾರದಿಂದ ಸಾಲಗಳು ಮತ್ತು ಮುಂಗಡಗಳ ಪೂರ್ಣಾವಧಿ ಜಮೆ 1997–98ರಲ್ಲಿ ಒಟ್ಟು 6,456 ಕೋಟಿ ರೂಪಾಯಿಗಳು 1998–99ರಲ್ಲಿ 7,720 ಕೋಟಿ ರೂಪಾಯಿಗಳು 1999–2000ರಲ್ಲಿ 10,744 ಕೋಟಿ ರೂಪಾಯಿಗಳು 2001–02ರಲ್ಲಿ 13,285 ಕೋಟಿ ರೂಪಾಯಿಗಳು, 2002–03ರಲ್ಲಿ 15,631 ಕೋಟಿ ರೂಪಾಯಿಗಳು ನಾನು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತೇನೆ, ನಾವು 1999–2000ನೇ ಸಾಲಿನಲ್ಲಿ ನೀವು ಪಡೆದಂತಹ ಸಾಲಕ್ಕಿಂತಲು ಕೂಡ ನಮಗೆ ಬಂದಂತಹ ಸಾಲ 927 ಕೋಟಿ ರೂಪಾಯಿಗಳು ಆದರೆ ನಾವು ಕಟ್ಟಿದಂತಹ ಹಣ ಬಡ್ಡಿ ಸಮೇತ ಎಷ್ಟು ಎಂದರೆ 1400 ಕೋಟಿ ರೂಪಾಯಿಗಳು ಅಂದರೆ ನಾವು 570 ಕೋಟಿ ರೂಪಾಯಿಗಳನ್ನು ನಮ್ಮ ರೆವಿನ್ಯೂ ಎಂದರೆ ಬಂದಿರುವಂತಹ ರೆವಿಟ್ ಹಣವನ್ನು ಸಾಲಕ್ಕೆ ಕಟ್ಟಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಬಂತು. ಅವತ್ತು ಕೇಂದ್ರ ಸರ್ಕಾರ ನಮ್ಮ ನೆರವಿಗೆ ಬಂತು. ಬಂದು ಅವರು ಈ ಪ್ರಸ್ತುತ ಸಾಲಿನಲ್ಲಿ 2176 ಕೋಟಿ ರೂಪಾಯಿಗಳನ್ನು Extra ಈ ರಾಜ್ಯಕ್ಕೆ ಕೊಟ್ಟರು. 8.89 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಗ್ಯಾರಂಟಿ ಕೊಟ್ಟಿರುವಂತಹ ಹಣವನ್ನು ನ್ಯಾಯಾಲಯದಲ್ಲಿ ಇವತ್ತು ಪಡೆದಿದ್ದಾರೆ. ಇನ್‌ವೋಕ್ ಆಗಿದೆ. ಆ ದಾಖಲೆಗಳನ್ನು ನಿಮಗೆ ಕೊಡುತ್ತೇನೆ. ಇವತ್ತು ಕೇಂದ್ರ ಸರ್ಕಾರದ ಸಾಲ ಮತ್ತು ವರ್ಲ್ಡ್ ಬ್ಯಾಂಕ್ ವಿಚಾರದಲ್ಲಿ ಕೇಂದ್ರ ಸರ್ಕಾರ ಅಸಿಸ್ಟೆನ್ಸ್‌ಗೆ ಬಂದಿಲ್ಲ ಎಂದು ಹೇಳುತ್ತಿದ್ದರು. ಇವತ್ತು 2001–02 ಹಾಗೂ 2002–03ರಲ್ಲಿ ಕೇಂದ್ರದಿಂದ ಬಂದಿರುವಂತಹ ಹಣದ ಆಧಾರದ ಮೇಲೆ ನಮ್ಮ ಡೆಫಿಸಿಟ್ ಇವತ್ತು ಸರ್‌ಪ್ಲಸ್ ಆಯಿತು. 87 ರೂಪಾಯಿಗಳನ್ನು ಬಂದಂತಹ ಸಾಲವನ್ನು ತೀರಿಸುವುಗಕ್ಕೆ ಕಟ್ಟಿದ್ದೇವೆ. ನಮ್ಮ ಹತ್ತಿರ ಇರುವುದು 13 ರೂಪಾಯಿಗಳು ಮಾತ್ರ. ಅಂದರೆ ಕ್ಯಾಪಿಟಲ್ ಅಸೆಟ್ ಆಯಿತು ಕ್ಯಾಪಿಟಲ್ ಅಸೆಟ್ ಏನು ನಿರ್ಮಾಣ ಮಾಡುವಂತಹ ವ್ಯವಸ್ಥೆಗಳು ಇಲ್ಲ. ಇವತ್ತು ವರ್ಲ್ಡ್ ಬ್ಯಾಂಕ್ ಸಾಲವನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ನಾವು ವರ್ಲ್ಡ್ ಬ್ಯಾಂಕ್ ಸಾಲಕ್ಕೆ ಹೋದೆವು. ಕೇಂದ್ರ ಸರ್ಕಾರ ನಮಗೆ ಏನೂ ಕೊಟ್ಟಿಲ್ಲ ಎಂದು ಅದೇ ರಾಜ್ಯದ ಮುಖ್ಯಮಂತ್ರಿಗಳು ಕಳೆದ ಬಜೆಟ್ ಭಾಷಣದಲ್ಲಿ ಒಂದು ಮಾತು ಹೇಳಿದರು. ನಾವು ವರ್ಲ್ಡ್ ಬ್ಯಾಂಕ್ ಅನ್ನು ಬಿಕ್ಷೆ ಬೇಡುವುದಕ್ಕೆ ಹೋಗಿರಲಿಲ್ಲ; ಅವರೇ ನಮ್ಮ ಆರ್ಥಿಕ ಸ್ಥಿತಿ ತುಂಬಾ ಚೆನ್ನಾಗಿ ಇದೆ ಎಂದು ಸಾಲ ಕೊಡುವುದಕ್ಕೆ ಬಂದಿದ್ದರು ಎಂದು ಹೇಳಿದರು. ಆಯಿತು ಒಪ್ಪುತ್ತೇನೆ. ವಿಶ್ವಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಜೇಮ್ಸ್ ಡಿ ಘುಲನ್‌ಸನ್ ಅವರು ಕರ್ನಾಟಕಕ್ಕೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಇದು. ವಿಶ್ವಬ್ಯಾಂಕ್‌ನಲ್ಲಿ 1996–97ರವರೆಗೆ ಕರ್ನಾಟಕ ಯಾವುದೇ ಸಾಲ ಪಡೆದಿಲ್ಲ. 1998–99ರವರೆಗೆ ಮೂರು ಸಾಲುಗಳಲ್ಲಿ 480 ಕೋಟಿ ರೂಪಾಯಿಗಳ ಸಾಲ ಪಡೆವರು ನೀವು. ಆದರೆ ಇಷ್ಟು ಮಾತ್ರ ನಿಜ ಅಲ್ಲಿ 2000–01ರಲ್ಲಿ ವಿಶ್ವಬ್ಯಾಂಕ್‌ಗೆ 12 ಸಾವಿರ ಕೋಟಿ ರೂಪಾಯಿಗಳಿಗೆ

ಅಪ್ಲಿಕೇಷನ್ ಹಾಕಿದ್ದೀರಿ. ಅದಕ್ಕೆ ಇವತ್ತು ಉತ್ತರವನ್ನು ಹೇಳುವಂತಹ ಸಮಯದಲ್ಲಿ ಆ ಮಾತನ್ನು ಹೇಳಿದರು. ಕೇಂದ್ರ ಸರ್ಕಾರ ನಮಗೆ ಸಹಕಾರವನ್ನು ಕೊಟ್ಟಿಲ್ಲ. ಅದಕೋಸ್ಕರ ನಮಗೆ ಬೇರೆ ಬೇರೆಯದಕ್ಕೆ ಸಾಲ ಬರಲಿಲ್ಲ ಎಂದು ಹೇಳಿದರು. ವಿಶ್ವಬ್ಯಾಂಕ್ ಸಾಲ ಕೊಡಬೇಕಾದರೆ ಎನು ಮಾಡಬೇಕಾಗುತ್ತದೆ. ಯಾವುದೇ ಯೋಜನೆಗೆ ರಾಜ್ಯ ಸರ್ಕಾರ ಆಯವ್ಯಯದ ಅಂದಾಜಿನಲ್ಲಿ ಮೊದಲು ಹಣವನ್ನು ಇಡಬೇಕು. ಇಟ್ಟಿದ್ದೀರಾ? ಇಲ್ಲ. ಯಾವ್ಯಾವ ಸೆನ್ಸಾರ್‌ಗೆ ನೀವು ಹಣ ಇಟ್ಟಿದ್ದೀರಿ ? ಇಟ್ಟಿಲ್ಲ ನೀವು. ಈ ಯೋಜನೆಗಳಿಗೆ ಮೊದಲು ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡಿ, ನಂತರ ಕೇಳಬೇಕಾದಂತಹ ಕಾರ್ಯಗಳಿಗೆ ಹಿಂಬರಿಕೆ ಬರೆಯುವುದು. ನಂತರ ಪ್ರತಿ ತಿಂಗಳು ಕ್ಲೇಮು ಮೂಲಕ ಭಾರತ ಸರ್ಕಾರದ ನಿಯಂತ್ರಕರು ನೆರವೂ ಲೆಕ್ಕಪರಿಶೋಧನೆಯನ್ನು ಇವರಿಗೆ ಕಳುಹಿಸಬೇಕು. ಅಲ್ಲಿ ಅವರು ಪರಿಶೀಲಿಸಿದ ನಂತರ ಅದು ವಿಶ್ವಬ್ಯಾಂಕ್‌ಗೆ ಕಳುಹಿಸಲಾಗುವುದು. ವಿಶ್ವಬ್ಯಾಂಕ್ ಅದನ್ನು ಪರಿಶೀಲಿಸಿ ನಂತರ ಹಣವನ್ನು ಭಾರತ ಸರ್ಕಾರಕ್ಕೆ ಬಿಡುಗಡೆ ಮಾಡಲಾಗುತ್ತದೆ. ಇದು ನಾನಲ್ಲ ಹೇಳಿರುವುದು ವಿಶ್ವಬ್ಯಾಂಕ್. ಪ್ರತಿತಿಂಗಳು ಆಡಿಟ್ ರಿಪೋರ್ಟ್ ಕಳುಹಿಸಿಕೊಟ್ಟಿದ್ದೀರಲ್ಲಾ ಅದರಲ್ಲಿ ಒಂದು ಪ್ಯಾರಾ ಓದುತ್ತೇನೆ. ಅಷ್ಟಕ್ಕೆ ಸಾಕು ಎಂದರೆ ಸಾಕು ಎನ್ನಿ ನಿಲ್ಲಿಸಿಬಿಡುತ್ತೇನೆ. ನಾನು ಬರೆದಿದ್ದರೆ. ಏನಾದರೂ ಆಗುತ್ತಿತ್ತು. ಸಿಎಜಿ ಯವರು ನಿಮ್ಮ ಸರ್ಕಾರದ ಮೇಲೆ ಬರೆದಿದ್ದಾರೆ.

" The state Government had tried to softern its Budget constraints with borrowing through special purpose vehicle like KBJNL, KNNL, the financial assets of the Government are being repeatedly overtaken by its liabilities indicating unsatisfactory financial condition time and again."

ಇದು ಸಿಎಜಿಯವರು ರಾಜ್ಯ ಸರ್ಕಾರಕ್ಕೆ ಬರೆದಿರುವಂತಹ ದೊಡ್ಡ ಬಳುವಳಿ ಪತ್ರ. ಈ ಪತ್ರ ಇಲ್ಲಿ ಸಿಕ್ಕಿರುವಾಗ,. ಈ ಪತ್ರವನ್ನು ತೆಗೆದುಕೊಂಡು ಹೋಗಿ ವರ್ಲ್ಡ್ ಬ್ಯಾಂಕಿಗೆ ಕೊಟ್ಟಾಗ, ನಿಮಗೆ ಎಲ್ಲಿಂದ ಸಾಲ ಸಿಗುತ್ತದೆ ? ಸಾಲದ ರೀ-ಪೇಮೆಂಟ್ ಮಾಡುವಂತಹ ಕೆಪಾಸಿಟ್ ನಮ್ಮಲ್ಲಿ ಇಲ್ಲ ಎನ್ನುವಂತಹ ಪ್ರಮುಖವಾದಂತಹ ಅಂಶವನ್ನು ಹೇಳುತ್ತೇನೆ. ಇನ್ನು ಈ ಸರ್ಕಾರದಲ್ಲಿ ಹಣಕಾಸಿನ ಪರಿಸ್ಥಿತಿಯ ವಲ್ನರೆಬಿಲಿಟಿ ಮತ್ತು ಏನಿದೆ ? ಇದು ಪೂರ್ ರೇಟಿಂಗ್ ಎಂದು ಹೇಳಿಲ್ಲ, ಅದನ್ನು ಸಿಎಜಿಯವರು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. ನಮ್ಮ ಸಸ್ಟೆನಬಿಲಿಟ್ಸ್ ಬಗ್ಗೆ ನನ್ನ ಮುಂದೆ ಒಂದು ವರದಿ ಇದೆ. ಇದು ಏನೆಂದರೆ, balance from current revenue (CBR) ಇದು ಒಂದು ಪಾಸಿಟೀವ್ ಸಿಬಿಆರ್ ಏನು ಹೇಳುತ್ತದೆಂದರೆ, ನಾವು ಪಡೆದಂತಹ ಸಾಲ ಏನಿದೆ, ಅದರಲ್ಲಿ ಹೆಚ್ಚಿಗೆ ಹಣವನ್ನು ಉಳಿಸಿ, ಡೆವಲಪ್‌ಮೆಂಟ್ ಆ್ಯಕ್ಟ್ ವಿಟೀಸ್‌ಗೆ ಹಾಕಿದರೆ, ಅದನ್ನು ಒಳ್ಳೆಯ ಸಿಬಿಆರ್ ಎಂದು ಕರೆಯುತ್ತಾರೆ. ಆದರೆ ಇವತ್ತು ರಾಜ್ಯದ ಮುಖ್ಯಮಂತ್ರಿಯವರು ಉತ್ತರವನ್ನು ಹೇಳುವುದಕ್ಕೆ ಮೊದಲು, ಸಿಎಜಿಯವರು ವರದಿ 31.3.2002ಕ್ಕೆ ಬಂದಿರುವಂಥಾದ್ದರಲ್ಲಿ ಪೇಜ್ ನಂ.26ನ್ನು ಒಂದು ಸಲ ನೋಡಿದರೆ ಸಾಕು ಅಲ್ಲಿ ಏನೆಂದು ಹೇಳಿದ್ದಾರೆಂದರೆ, CBR is defined as revenue receipt minus the entire plan expenditure had therefore to be met out of assistance from Government of india and market borrowings.ಅಂದರೆ ಕರ್ನಾಟಕ ರಾಜ್ಯ ಸರ್ಕಾರ ನಡೆಯುತ್ತಿರುವಂಥಾದ್ದು, ಕೇಂದ್ರ ಸರ್ಕಾರದ ಸಹಾಯದಿಂದ ಮತ್ತು ಮಾರುಕಟ್ಟೆಯ ಸಾಲದಿಂದ ಎಂದು ಇದರಲ್ಲಿ ಹೇಳಿದೆ. ನಾನು ಇದನ್ನು ಮತ್ತೊಮ್ಮೆ ಹೇಳುತ್ತೇನೆ.

ಇದು ರಾಜ್ಯ ಸರ್ಕಾರದ ಪೂರ್ಣವಾದಂತಹ ಶ್ವೇತ ಪತ್ರ.

The entire plan expenditure had therefore tobe met out of assiatance from Government of India and market borrowings.

ಸಾಲವನ್ನು ಎತ್ತುವಳಿ ಮಾಡುವಂಥಾದ್ದು ಮತ್ತು ನಾವು ಕೇಂದ್ರ ಸರ್ಕಾರದಿಂದ ಬರುವಂತಹ ಅಸಿಸ್ಟೆನ್ಸ್‌ನ ಆಧಾರದ ಮೇಲೆ, ಇವತ್ತು ನಾವು ಬದುಕುತ್ತಿದ್ದೇವೆ. ದಯಮಾಡಿ, ಕೇಂದ್ರ ಸರ್ಕಾರದಿಂದ ಕಳೆದ ನಾಲ್ಕು ವರ್ಷಗಳಿಂದ ಬಂದಂತಹ ಹಣ, ಎಷ್ಟೆಷ್ಟು ಯಾವ್ಯಾವ ಇಲಾಖೆಗಳಿಗೆ ಬಂತು ಎಷ್ಟು ಉಪಯೋಗ ಮಾಡಿದ್ದೀರಿ, ಎಷ್ಟು ಉಪಯೋಗಿಸಲಿಲ್ಲವೆನ್ನುವ ಬಗ್ಗೆ ಸರ್ಕಾರ ಶ್ವೇತ ಪತ್ರವನ್ನು ಕೊಡುತ್ತಪೆಯೇ ? ಅದು ಸಾಧ್ಯವಿಲ್ಲ, ಏಕೆಂದರೆ ಇವರ ಶೇರು ಏನು ಕೊಡಬೇಕಾಗಿತ್ತೋ, ಅದನ್ನು ಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ.

They have failed in realised more than 800-900 crores every year.

ಇದು ರಾಜ್ಯ ಸರ್ಕಾರದ ವೈಫಲ್ಯವನ್ನು ತೋರಿಸುವಂಥಾದ್ದು ಆಗಿದೆ. ಈ ಮಾತನ್ನು ಹೇಳುತ್ತಾ ಕಳೆದ ನಾಲ್ಕು ವರ್ಷಗಳಲ್ಲಿ ಈ ರಾಜ್ಯದ ರಾಜಸ್ವ ಕೊರತೆ, ವಿತ್ತೀಯ ಬಾಧ್ಯತೆ, ಇದು ತೀರಾ ಕೆಳಮಟ್ಟಕ್ಕೆ ಹೋಗುವಂತಹ ವ್ಯವಸ್ಥೆಯಾಯಿತು. ಸಾರ್ವಜನಿಕರಿಂದ ಬಂದಂತಹ ಬಂಡವಾಳ, ಸಾಲ, ಇದರ ಬಗ್ಗೆ ತುಂಬಾ ನೋವಿನಿಂದ ಹೇಳಬೇಕಾಗಿದೆ. ಈ ರಾಜ್ಯದಿಂದ ಬಂದಂತಹ ಸಾಲವನ್ನು ಹಿಂದಿನಿಂದ ಬಂದಂತಹ ಸಾಲವನ್ನು ಬಡ್ಡಿಯನ್ನು ತೀರಿಸುವುದಕ್ಕಾಗಿ ಅಲ್ಲದೇ ರೆವಿನ್ಯೂ ಎಕ್ಸ್‌ಪೆಂಡಿಚರ್ ಅನ್ನು ಇನ್‌ಕರ್ ಮಾಡುವಂತಹ ವ್ಯವಸ್ಥೆ ಇದರಲ್ಲಿ ಆಗಿದೆ, ಎನ್ನುವುದಾದರೆ ಇವತ್ತು ಯಾವ ರೀತಿಯಲ್ಲಿ ದಿವಾಳಿ ಸರ್ಕಾರವಾಗಿದೆ. ಎಂಬುದನ್ನು ನಾನು ಕೇಳಬೇಕಾಗಿದೆ.

Returns on investment and capital investment,

ಇದು ನಮ್ಮ ರಾಜ್ಯದಲ್ಲಿ ಶೇ.0.22 ಇದರ ಜೊತೆಗೆ ಡಿಫಿಸಿಟ್ ಅನ್ನು ಬಹಳ ಚೆನ್ನಾಗಿ ನಯವಾಗಿ ರಾಜ್ಯದ ಮುಖ್ಯಮಂತ್ರಿಯವರು ಮಾಡಿದ್ದಾರೆ. ಡಿಫಿಸಿಟ್ ಎಂದು ತೋರಿಸಬಾರದಲ್ಲಾ, ಅದಕ್ಕೆ ಏನು ಮಾಡಿದ್ದಾರೆ ? ಪಬ್ಲಿಕ್ ಅಕೌಂಟ್ಸ್‌ನಲ್ಲಿ ಬಾರೋಯಿಂಗ್ಸ್ ಮೂಲಕವಾಗಿ ವ್ಯವಸ್ಥಿತವಾಗಿ ಅಡ್ಜಸ್ಟ್‌ಮೆಂಟ್ ಮಾಡುವಂಥಾದ್ದನ್ನು ನಾವು ಇಲ್ಲಿ ಕಾಣುತ್ತಿದ್ದೇವೆ. ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಮಾತನ್ನು ಹೇಳಿದರು. ಹೆಚ್ಚುವರಿ ರಾಜಸ್ವ ಇದ್ದಲ್ಲಿ, ಅದು ಹಣದುಬ್ಬರದಿಂದ ಮಾತ್ರ, ಲ್ಯಕ್ಚುಯಲ್ ಗ್ರೋತ್ ಆಗಿದೆ. ಇದನ್ನು ನಾನು ಹೇಳಿಲ್ಲ. ಕರ್ನಾಟಕವಲ್ಲಿ ರೆವಿನ್ಯೂ ಜಾಸ್ತಿಯಾಗಿದೆಯೆಂದು ತೋರಿಸಿದ್ದೀರಲ್ಲಾ, ಅದು ಲ್ಯಕ್ಚುಯಲ್ ರೆವಿನ್ಯೂ ಅಲ್ಲ. It is only inflated. Because of the inflation, ಅದು ಆಗಿರುವುದು ಹೊರತು ಆದಂತಹ ಸಾಧನೆಯಲ್ಲವೆಂದು ಅವರು ವರದಿಯಲ್ಲಿ ಹೇಳಿದ್ದಾರೆ. ಯಾವುದೇ ರಾಜ್ಯ ಸರ್ಕಾರದ ಒಂದು financial soundnessಅನ್ನು ಯಾವುದರಲ್ಲಿ ನೋಡುತ್ತೇವೆಂದರೆ, capital repayment Vs. capital borrowings ಅಂದರೆ. ನಾವು ಸಾಲವನ್ನು ಪಡೆಯುವುದರಲ್ಲೂ, ಮತ್ತೆ ಸಾಲವನ್ನು ಎಷ್ಟು ಹಿಂದಕ್ಕೆ ಕೊಡುತ್ತಿದ್ದೇವೆ ಎಂಬುದನ್ನು ಇದರ ಆಧಾರದ ಮೇಲೆ ಮಾಡುತ್ತೇವೆ. ಆದರೆ ರಾಜ್ಯದ ಈಗಿನ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಅದು ಶೇಕಡ ಎರಡರಷ್ಟು ಇತ್ತು ಈಗ ಅದು ಶೇ. 1.2 ಆಗಿದೆ. ಅಂದರೆ ಸಾಲವನ್ನು ಹಿಂದಕ್ಕೆ ಕೊಡುವಂತಹ ಕೆಪಾಸಿಟಿ ಕಡಿಮೆಯಾಗಿದೆ. ಇಷ್ಟನ್ನು ಹೇಳುತ್ತಾ, ನಮ್ಮ ಮುಂದೆ ಇವತ್ತು ಸಮಸ್ಯೆಗಳು ಇವೆ. ನಾವು ಕೂಡ ನಗರ ಪ್ರದೇಶಗಳಿಂದ ಬಂದಂಥವರೇ. ನಗರ ಪ್ರದೇಶಗಳಲ್ಲಿರುವಂತಹ ಮುನಿಸಿಪಾಲಿಟಿಗಳು [illegible]

ಆದಾಯವನ್ನು ಜಾಸ್ತಿ ಮಾಡಬೇಕೆಂದು ಎಸ್.ಎ.ಎಸ್. ಪದ್ಧತಿಯನ್ನು ಜಾರಿಗೆ ತಂದಿರಿ. ಈ ಪದ್ಧತಿ ಏನಾಯಿತು ? ಮಾನ್ಯ ಮಂತ್ರಿಯವರು ಮುಂದಿನ ವರ್ಷದಿಂದ ಎಸ್.ಎ.ಎಸ್. ಪದ್ಧತಿ ಜಾರಿಗೆ ಬರುತ್ತದೆಂದು ಹೇಳುತ್ತಾರೆ, ಇನ್ನೊಂದು ಕಡೆ ಜಾರಿಗೆ ಕೊಡದೆ ಇರುವವರನ್ನು ಜೈಲಿಗೆ ಕಳುಹಿಸುತ್ತೇವೆಂದು ಹೇಳುತ್ತಾರೆ, ಮತ್ತೊಂದು ಕಡೆ ನ್ಯಾಯಾಲಯದಲ್ಲಿ ತಡೆಯಾಜ್ಞೆಯಾಗಿದೆ. ಈ ರಾಜ್ಯದಲ್ಲಿ ಯಾವ ಪದ್ಧತಿಯನ್ನು ಅನುಸರಿಸಿ ಮುನಿಸಿಪಾಲಿಟಿಗಳು ಟ್ಯಾಕ್ಸ್ ಅನ್ನು ಪಡೆಯಬೇಕು ? ಈ ಒಂದು ವ್ಯವಸ್ಥೆಯ ಒಳಗೆ ಯಾವುದೇ ಒಂದು ಕ್ಲಾಂಫಿಕೇಶನ್ ಅನ್ನು ಕ್ರಿಯೇಟ್ ಮಾಡುವುದಕ್ಕೆ, ಅಸೆಟ್ ಅನ್ನು ಕ್ರಿಯೇಟ್ ಮಾಡುವುದಕ್ಕೆ ರಾಜ್ಯ ಸರ್ಕಾರ ಫೇಲ್ ಆಗಿದೆ ಎನ್ನುವ ಮಾತನ್ನು ಹೇಳುತ್ತಾ, ಈ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ದಿವಸದಿಂದ ಕೇಂದ್ರ ಸರ್ಕಾರದ ಅಸಿಸ್ಟೆನ್ಸ್, ಮಾತ್ರವಲ್ಲ, ಎಕ್ಸ್‌ಸ್ರ್ಯಲ್ ಮತ್ತು ಇಂಟರ್ನಲ್ ಬಾರೋಯಿಂಗ್ಸ್‌ನಿಂದ ಮಾತ್ರ,ಶೇ.300 ಸಾಲವನ್ನು ಮಾಡಿ, ಸಾಲಗಾರ ರಾಜ್ಯವನ್ನಾಗಿ ಬಿಟ್ಟು, ನಾಳೆ ಬೆಳಿಗ್ಗೆ ರಾಜ್ಯದ ಮುಂದೆ ಹೋಗುತ್ತಿರುವಂಥಾದ್ದು, ವಿಧಾನಸಭೆಯನ್ನು ವಿಸರ್ಜನೆ ಮಾಡುತ್ತಿರುವಂಥಾದ್ದು, ಯಾವ ಅಚೀವ್‌ಮೆಂಟ್ ಅನ್ನುವಂಥಾದ್ದನ್ನು ರಾಜ್ಯದ ಮಾನ್ಯ ಮುಖ್ಯಮಂತ್ರಿಯವರು ಶ್ವೇತ ಪತ್ರದ ಮೂಲಕ ತಿಳಿಸಬೇಕು. ಹಾಗೆ ನಾನು ಶ್ರೀಮತಿ ಸೋನಿಯ ಗಾಂಧಿಯವರಿಗೆ ಒಂದು ಪತ್ರವನ್ನು ಬರೆದಿದ್ದೆ, ಈ ರಾಜ್ಯದ ಆರ್ಥಿಕ ವ್ಯವಸ್ಥೆ ಏನೇನು ಆಗಿದೆಯೆಂಬ ಬಗ್ಗೆ, ಅದಕ್ಕೆ ಸಂಬಂಧಪಟ್ಟ ಹಾಗೆ ಇಲ್ಲಿಂದ ವರದಿಯನ್ನು ತರಿಸಿಕೊಂಡಿದ್ದಾರೆ, ಆ ವರದಿ ಏನು, ಎಂಬುದನ್ನು ಜನತೆಯ ಮುಂದಿಡಬೇಕೆಂಬ ಮಾತನ್ನು ಹೇಳುತ್ತಾ, ವಿಶೇಷವಾಗಿ ಒಂದು inflated actuals ಅಲ್ಲದೇ ಇರುವಂತಹ boosted upfigures ಕೊಡುವುದಕ್ಕೋಸ್ಕರವಾಗಿ ರಾಜ್ಯದ ಮುಖ್ಯಮಂತ್ರಿಯವರು ಕೇವಲ ಚುನಾವಣೆ ಬಜೆಟ್ ಆಗಿ ಇದನ್ನು ಮಾಡಿದ್ದಾರೆ. ಇದು ಕೇವಲ ಆಶ್ವಾಸನೆಯ ಬಜೆಟ್, ಯಾವುದೇ ರೀತಿಯಾದಂತಹ ಸತ್ಯಾಂಶ ಇಲ್ಲದೇ ಇರುವಂತಹ ಕನ್ನಡಿಯೊಳಗಿನ ಗಂಟಾಗಿರುವಂತಹ ಬಜೆಟ್ ಎಂದು ಹೇಳಿ ಇದನ್ನು ವಿರೋಧ ಮಾಡುತ್ತಾ ಇದರಿಂದ ನಾಲ್ಕು ವರ್ಷಗಳಲ್ಲಿ ಈ ರಾಜ್ಯದ ಅರ್ಥ ವ್ಯವಸ್ಥೆ ಹಾಳಾಗಿದೆ ಎಂದು ಬಹಳ ದುಃಖದಿಂದ ಹೇಳಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

†**ಶ್ರೀ ಷಹಜಹಾನ್ ಇಸ್ಮಾಯಿಲ್ ದೊಂಗರಗಾಂವ್(ಅಥಣಿ)** : ಮಾನ್ಯ ಛೇರ್ಮನ್‌ರವರೆ, 2004–2005ನೇ ಸಾಲಿನ ಆಯವ್ಯಯದ ವಿಷಯದ ಮೇಲೆ, ಮಾತನಾಡುವುದಕ್ಕೆ ನನಗೆ ಅವಕಾಶವನ್ನು ಕೊಟ್ಟದ್ದಕ್ಕಾಗಿ, ಪ್ರಥಮವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತಾ, ಈ ವರ್ಷದ ಆಯವ್ಯಯ ನಿಜವಾಗಿಯೂ ಇದು ಜನ ಪರವಾಗಿರುವಂಥಾದ್ದು, ರೈತರ ಪರವಾಗಿ ಇರುವಂಥಾದ್ದು ಮತ್ತು ಉತ್ತಮ ಆಯವ್ಯದಯವೆನ್ನುವಂತಹ ವಿಷಯ ಈಗಾಗಲೇ ಎಲ್ಲಾ ಪತ್ರಿಕೆಗಳಲ್ಲೂ, ಮಾಧ್ಯಮಗಳಲ್ಲೂ ಪ್ರಸಾರವಾಗಿ ಅದರಲ್ಲೂ ಈ ಕರ್ನಾಟಕದ ಜನತೆ ಒಪ್ಪಿಕೊಂಡಿರುವಂತಹ ವಿಷಯ ನಮಗೆ, ನಿಮಗೆಲ್ಲಾ ಗೊತ್ತಿರುವಂಥಾದ್ದು, ಕಳೆದ ನಾಲ್ಕು ವರ್ಷಗಳ ಅವಧಿಯನ್ನು ನಾವು ಗಮನಿಸಿದಾಗ, ಯಾವ ರೀತಿಯಲ್ಲಿ ಎಂತಹ ಪ್ರಸಂಗಗಳಲ್ಲಿ ಈ ಸರ್ಕಾರ ನಡೆದುಕೊಂಡು ಬಂದಿತ್ತು, ಎಂಬ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿದಾಗ, ಅನೇಕ ಗುರುತರವಾದಂತಹ ಸಮಸ್ಯೆಗಳು ಈ ನಾಲ್ಕು ವರ್ಷಗಳಲ್ಲಿ ಬಂದವು. ಅದು ಇವತ್ತು ಕಾವೇರಿ ನೀರಿನ ವಿವಾದ ಇರಬಹುದು, ಡಾ : ರಾಜ್‌ಕುಮಾರ್‌ರವರ ಅಪಹರಣದ ವಿಷಯವಾಗಿರಬಹುದು, ಬರಗಾಲದ ವಿಷಯವಾಗಿರಬಹುದು, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ವಿಷಯವಾಗಿರಬಹುದು, ಇಂತಹ ಎಲ್ಲಾ ಗಂಭೀರವಾದಂತಹ ಸಮಸ್ಯೆಗಳನ್ನು ಎದುರಿಸಿ, ಈ ಸರ್ಕಾರ ಇಷ್ಟೊಂದು ಅರ್ಥಿಕವಾಗಿ, ಹಾಗೂ

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಮರಸ್ಕರಿಸಿಲ್ಲವೆಂದು ಸೂಚಿಸುತ್ತದೆ)

ರಾಜ್ಯದ ಪ್ರಗತಿಯಲ್ಲಿ ಮಹತ್ತರವಾದಂತಹ ಸಾಧನೆಯನ್ನು ಮಾಡಿರುವುದನ್ನು ನೋಡಿದರೆ, ನಿಜವಾಗಿ ಈ ಸರ್ಕಾರದ ಸಾಧನೆ ಮತ್ತು ಈ ವರ್ಷದ ಆಯವ್ಯಯ, ಸಾವೆಲ್ಲರೂ ಮೆಚ್ಚುವಂತಹ ವಿಷಯವೆಂದು ನಾನು ಸ್ಪಷ್ಟವಾಗಿ ಇಲ್ಲಿ ಹೇಳಬಯಸುತ್ತೇನೆ. ಇಷ್ಟೆಲ್ಲಾ ಕಷ್ಟದಲ್ಲಿ ಈ ರಾಜ್ಯವನ್ನು ಮುನ್ನಡೆಸಿಕೊಂಡು ಹೋಗಿರುವಂಥಾದ್ದು, ರಾಜ್ಯದ ಜನರನ್ನು ಕಷ್ಟದಿಂದ ಪಾರು ಮಾಡುವಂಥ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರ ಸರ್ಕಾರ ಮಾಡಿರುವುದನ್ನು ನೋಡಿದರೆ ಭಗವದ್ಗೀತೆ ಶ್ರೀಕೃಷ್ಣ ಬೇಳಿರುವ ಒಂದು ಶ್ಲೋಕ ಈಗ ನೆನಪಿಗೆ ಬರುತ್ತಿದೆ ಏನೆಂದರೆ " ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ, ಅಭ್ಯುತ್ಥಾನಂ ಅಧರ್ಮಸ್ಯ ತದಾನಾತ್ಮಂ ಸೃಜಾಮ್ಯಹಂ ಸಂಭವಾಮಿ ಯುಗೇ ಯುಗೇ ". ಅಂದರೆ, ಯಾವ್ಯಾವ ಸಂದರ್ಭಗಳಲ್ಲಿ ಕಷ್ಟಗಳು ಬರುತ್ತದೋ, ಅಂತಹ ಸಂದರ್ಭಗಳಲ್ಲಿ ನಾನು ಅವತರಿಸಿ ಬಂದು ಜನರನ್ನು ಕಷ್ಟದಿಂದ ಪಾರು ಮಾಡುವುದಾಗಿ ಶ್ರೀಕೃಷ್ಣ ಹೇಳಿರುವಂತೆ, ಈ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಕೃಷ್ಣರವರನ್ನು ಇದಕ್ಕೆ ಹೋಲಿಸುವ ಪ್ರಯತ್ನವನ್ನು ನಾನು ಇವೊತ್ತು ಮಾಡುತ್ತಿದ್ದೇನೆ. ಇಂತಹ ಕಷ್ಟದ ಸಮಯದಲ್ಲಿ ನಮ್ಮ ಸರ್ಕಾರ ಜನರನ್ನು ಯಾವ ರೀತಿ ಪಾರು ಮಾಡಿತೆಂದು ನಾವು ನೋಡಬಹುದು. ಅನೇಕ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ನೀರಾವರಿ ಯೋಜನೆಗಳಿಗೆ ಹೆಚ್ಚು ಅನುದಾನ ಕೊಡುವ ಮೂಲಕ ಹಿಪ್ಪರಗಿ ಯೋಜನೆ ಇರಬಹುದು. ಆಲಮಟ್ಟಿ ಯೋಜನೆ ಇರಬಹುದು, ರಸ್ತೆ ನಿರ್ಮಾಣ ಕಾರ್ಯ ಇರಬಹುದು, ಬಡತನ ನಿರ್ಮೂಲನಾ ಕಾರ್ಯಕ್ರಮ ಇರಬಹುದು, ಶಿಕ್ಷಣ ಕ್ಷೇತ್ರದಲ್ಲಿನ ' ಅಕ್ಷರ ದಾಸೋಹ' ಇರಬಹುದು, ಬಡವರಿಗೆ ಮನೆಗಳನ್ನು ಕಟ್ಟಿಕೊಡುವುದಾಗಿರಬಹುದು. ಸ್ತ್ರೀ ಶಕ್ತಿ ಯೋಜನೆ ಮುಖಾಂತರ ಮಹಿಳೆಯರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೀಕರಣ ಮಾಡಿಸುವುದಾಗಿರಬಹುದು. ಇಂತಹ ಅನೇಕ ಕ್ಷೇತ್ರಗಳಲ್ಲಿ ಸರ್ಕಾರ ಇವೊತ್ತು ಮಾಡಿರುವ ಸಾಧನೆಯನ್ನು ನೋಡಿದರೆ ನಾವು ಈ ಮಾತನ್ನು ಒಪ್ಪಲೇಬೇಕಾಗಿದೆ. ಇವೊತ್ತು ನೀರಾವರಿ ಯೋಜನೆಗಳಲ್ಲಿ ಆಲಮಟ್ಟಿ ಮತ್ತು ಹಿಪ್ಪರಗಿ ಯೋಜನೆಯ ಪರಿಸ್ಥಿತಿ ಏನಾಯಿತು ? ನಾವು ಬಿಜಾಪುರಕ್ಕೆ ಹೋದಾಗ ಅನೇಕ ಐತಿಹಾಸಿಕ ಕಟ್ಟಡಗಳನ್ನು ನೋಡುತ್ತೇವೆ. ಗೋಲಗುಮ್ಮಟವಿರಬಹುದು, ಉಪ್ಪಲಿ ಬುರುಜು ಇರಬಹುದು, ಇಬ್ರಾಹಿಂ ರೋಜಾ ಇರಬಹುದು, ಇದರ ಜೊತೆಗೆ ಮತ್ತೊಂದು ಬಾರಾ ಕಮಾನು ನೋಡುತ್ತೇವೆ. ಈ ನೀರಾವರಿ ಯೋಜನೆಗಳ ಪರಿಸ್ಥಿತಿ ಆ ಬಾರಾ ಕಮಾನು ತರಹವೇ ಆಗಿತ್ತು. ಪ್ರಾರಂಭಿಕ ಹಂತದಲ್ಲಿ ಅವೆಲ್ಲಾ ನಿಂತುಹೋಗಿತ್ತು. ಹಿಂದಿನ ಸರ್ಕಾರಗಳೆಲ್ಲವೂ ಆ ಯೋಜನೆಗಳನ್ನೆಲ್ಲವನ್ನು ಪೂರ್ತಿಗೊಳಿಸಿ ನೀರಾವರಿ ಸೌಕರ್ಯವನ್ನು ರಾಜ್ಯದ ಜನತೆಗೆ ಒದಗಿಸಿಕೊಡುವಲ್ಲಿ ವಿಫಲವಾಗಿತ್ತು. ಅಂತಹ ಮಹತ್ತರವಾದ ಯೋಜನೆಗಳನ್ನು ನಿಗದಿತ ಅವಧಿಯೊಳಗೆ ಹೆಚ್ಚು ಅನುದಾನ ಒದಗಿಸುವ ಮುಖಾಂತರ ಆಲಮಟ್ಟಿ ಯೋಜನೆಯನ್ನು ಇವೊತ್ತು ರಾಜ್ಯದ ಜನತೆಗೆ ಅರ್ಪಿಸಿದ್ದಾರೆ. ಹಿಪ್ಪರಗಿ ಯೋಜನೆ ಇವೊತ್ತು ಕೊನೆಯ ಹಂತದಲ್ಲಿದ್ದು, ಕ್ರಸ್ಟ್ ಗೇಟ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಇದರ ಹೊರತಾಗಿ ಆ ಹಿಪ್ಪರಗಿ ಯೋಜನೆಯಲ್ಲಿ ಬರಗಾಲ ಪೀಡಿತ ಅಥಣಿ ತಾಲ್ಲೂಕಿನ ಕರಿಮಸೂತಿ ಸಾವಳಗಿ ಪಿಂಗಳ ಎನ್ನುವ ಹೊಸ ಯೋಜನೆಯನ್ನು ಈ ಸರ್ಕಾರ ರೂಪಿಸಿ ಮಂಜೂರಾತಿ ಕೊಡುವ ಮೂಲಕ ಆ ಕಾರ್ಯ ಪ್ರಗತಿಯಾಗಿರುವುದನ್ನು ನೋಡಿದರೆ ನಿಜವಾಗಿಯೂ ಬರಗಾಲ ಪೀಡಿತ ಜನರಿಗೆ ಆಶಾದಾಯಕವಾಗಿದ್ದಂಥ ಒಂದೇ ಒಂದು ಯೋಜನೆಯನ್ನು ಅನುಷ್ಠಾನಗೊಳಿಸಿರುವುದು ಸರ್ಕಾರದ ಸಾಧನೆಯಾಗಿದೆ. ಇಡೀ ಉತ್ತರ ಕರ್ನಾಟಕದಲ್ಲಿಯೇ ಮಹತ್ತರವಾದ ಸಾಧನೆಯನ್ನು ಈ ಸರ್ಕಾರ

ಮಾಡಿ ತೋರಿಸಿದೆಯೆಂದು ಹೇಳಬೇಕಾಗುತ್ತದೆ. ಈ ಕರಿಮಸೂತಿ ಸಾವಳಗಿ ಪಿಂಗಳ ಯೋಜನೆಯಲ್ಲಿ ಇವೊತ್ತು ಎಂಭತ್ತು ಸಾವಿರ ಎಕರೆಯಷ್ಟು ಜಮೀನು ನೀರಾವರಿಗೊಳಪಡುತ್ತಿದ್ದು ಸುಮಾರು 30ರಿಂದ 32 ಬರಪೀಡಿತ ಗ್ರಾಮಗಳು ಶಾಶ್ವತವಾಗಿ ನೀರಾವರಿ ಸೌಲಭ್ಯಕ್ಕೊಳಪಡುವುದಲ್ಲದೆ. ಕುಡಿಯುವ ನೀರಿನ ಸೌಲಭ್ಯಕ್ಕೊಳಪಡುತ್ತವೆ. ಈ ಯೋಜನೆ ಇವೊತ್ತು ಕಾರ್ಯಗತವಾಗಿರುವುದು ಬಹಳ ಮಹತ್ತರವಾದ ಹೆಜ್ಜೆಯೆಂದೇ ಹೇಳಬೇಕು. ಇಷ್ಟೆಲ್ಲಾ ಸಂಘರ್ಷದ ಹಾದಿಯಲ್ಲಿ.... man proposes god disposes ಎಂದು ಏನು ಹೇಳುತ್ತೇವೆ, ಇವೊತ್ತು ಈ ಸರ್ಕಾರ, ಮಾನವ ರಚಿತ ಸಂಸ್ಥೆ ಬೇಕಾದಷ್ಟು ಮಾಡಿದರೂ ನೈಸರ್ಗಿಕ ವಿಪತ್ತಿನಲ್ಲಿ ನಾವು ಯಾವ ರೀತಿ ಮುಂದೆ ಸಾಗಬೇಕೆಂಬ ವಿಷಯಗಳನ್ನು ಗಂಭೀರವಾಗಿ ಯೋಚಿಸಿದಾಗ ನಾವು ಈ ಸಂದರ್ಭದಲ್ಲಿ ಈ ಸರ್ಕಾರ ಯಾವ ಪ್ರಮಾಣದಲ್ಲಿ ಬರಗಾಲ ಪರಿಹಾರಕ್ಕಾಗಿ ಇವೊತ್ತು ಶ್ರಮಪಟ್ಟು ನಾಲ್ಕು ನೂರು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಹಣವನ್ನು ಬರ ಪರಿಹಾರ ಕಾರ್ಯಕ್ರಮಕ್ಕಾಗಿ ಖರ್ಚು ಮಾಡಿ ಇಡೀ ರಾಜ್ಯದ ಜನರನ್ನು ಬರದಿಂದ ಮುಕ್ತಿಗೊಳಿಸುವಂಥ ಕೆಲಸ ಮಾಡಿದೆ. ಅದು ಕುಡಿಯುವ ನೀರು ಪೂರೈಸುವುದಾಗಿರಬಹುದು, ಜಾನುವಾರಗಳಿಗೆ ಮೇವು ಒದಗಿಸುವುದಾಗಿರಬಹುದು, ಜನರಿಗೆ ಉದ್ಯೋಗಾವಕಾಶ ಕಲ್ಪಿಸುವಂಥಾದ್ದಾಗಿರಬಹುದು, ಈ ಎಲ್ಲಾ ವ್ಯವಸ್ಥೆಗಳನ್ನು ಮಾಡುವುದರಲ್ಲಿ ಈ ಸರ್ಕಾರ ಸಫಲವಾಗಿದೆ ಎನ್ನುವಂಥ ಮಾತನ್ನು ಇಲ್ಲಿ ಒಪ್ಪಲೇಬೇಕಾಗಿದೆ. ನಿಜವಾಗಿಯೂ ಉತ್ತರ ಕರ್ನಾಟಕಕ್ಕೆ ಈ ಬಜೆಟ್‌ನಲ್ಲಿ ಹೆಚ್ಚು ಆದ್ಯತೆ ಕೊಡಲಾಗಿದೆ ಎಂಬುದನ್ನು ನಾವು ಇವೊತ್ತು ಒಪ್ಪಬೇಕು. ನಾನು ಆಗಲೇ ಹೇಳಿದಂತೆ ಅನೇಕ ನೀರಾವರಿ ಯೋಜನೆಗಳ ಜೊತೆಗೆ ಉತ್ತರ ಕರ್ನಾಟಕಕ್ಕೆ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಮೂಲಕ ಇದಕ್ಕಾಗಿ ವಿಶೇಷವಾಗಿ ಒಬ್ಬರು ಅಭಿವೃದ್ಧಿ ಆಯುಕ್ತರನ್ನು ನೇಮಿಸುವುದಾಗಿರಬಹುದು, ಇವೊತ್ತು ಬಿಜಾಪುರದಲ್ಲಿ ಮಹಿಳಾ ವಿಶ್ವವಿದ್ಯಾನಿಲಯ ಪ್ರಾರಂಭವಾಗಿ ಈ ವಿಶ್ವವಿದ್ಯಾನಿಲಯ ಇವೊತ್ತು ಉತ್ತರ ಕರ್ನಾಟಕದ ಒಂದು ಮಹತ್ತರವಾದ ಸಂಸ್ಥೆಯಾಗಿದೆ, ಈ ಎಲ್ಲಾ ವಿಷಯಗಳತ್ತ ನಾವು ಗಮನಹರಿಸಿದರೆ, ಉತ್ತರ ಕರ್ನಾಟಕಕ್ಕೆ ಹೆಚ್ಚು ಆದ್ಯತೆಯನ್ನು ಆಯವ್ಯಯದಲ್ಲಿ ಕಲ್ಪಿಸಿಕೊಡಲಾಗಿದೆ ಎಂಬುದನ್ನು ನಾವು ಒಪ್ಪಬೇಕಾಗುತ್ತದೆ. ಕರ್ನಾಟಕಕ್ಕೆ ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಗೆ ಮೊದಲಿದ್ದಂಥ ರಸ್ತೆಗಳ ಪರಿಸ್ಥಿತಿ ಮತ್ತು ಈಗಿರುವ ಪರಿಸ್ಥಿತಿಗೆ ಸ್ವಲ್ಪ ಹೋಲಿಸಿ ನೋಡಿದಾಗ ಚಿತ್ರಣ ಯಾವ ರೀತಿ ಬದಲಾಗದೆ ಎಂಬುದನ್ನು ನಾವು ಕಾಣಬಹುದಾಗಿದೆ, ಇವೊತ್ತು ರಸ್ತೆಗಳ ನಿರ್ಮಾಣಕ್ಕಾಗಲಿ, ರಸ್ತೆಗಳ ಸುಧಾರಣೆಗಾಗಲಿ ಅತಿ ಹೆಚ್ಚು ಅನುದಾನವನ್ನು ಆಯವ್ಯಯದಲ್ಲಿ ಕಲ್ಪಿಸಿಕೊಡುವುದರಿಂದ, ರಾಜ್ಯ ಹೆದ್ದಾರಿಗಳನ್ನು ನಿರ್ಮಿಸುವುದಾಗಲಿ, ಎಲ್ಲಾ ಮುಖ್ಯ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದಾಗಲಿ ಅಥವಾ ಗ್ರಾಮೀಣ ರಸ್ತೆಗಳನ್ನು ನಬಾರ್ಡ್ ಸಾಲ ಪಡೆದು ಸುಧಾರಣೆ ಮಾಡುವುದಾಗಲಿ, ಕರ್ನಾಟಕ ರಾಜ್ಯದ ಮೂಲೆ-ಮೂಲೆಗಳಲ್ಲಿ ರಸ್ತೆಗಳು ಸುಧಾರಣೆಯಾಗಿರುವುದನ್ನು ನೋಡಿದರೆ, ದೇಹದಲ್ಲಿ ರಕ್ತವು ಯಾವ ರೀತಿ ಪರಿಚಲನೆಯಾಗಿ ಜೀವನಾಡಿಯಾಗಿ ಕೆಲಸ ಮಾಡುತ್ತದೋ ಅದೇ ರೀತಿ ರಸ್ತೆಗಳೂ ಸಹ ಈ ರಾಜ್ಯದ, ಸಮಾಜದ ಜೀವನಾಡಿಗಳಾಗಿವೆ. ಅಂತಹ ರಸ್ತೆಗಳನ್ನು ಇವೊತ್ತು ನಾವು ನೋಡುತ್ತಿದ್ದೇವೆ. ಅನೇಕ ಕಡೆಗಳಲ್ಲಿ ಅಂತಹ ರಸ್ತೆಗಳ ಉದ್ಘಾಟನೆಯೂ ಆಯಿತು. ಅನೇಕ ಕಡೆಗಳಲ್ಲಿ ರಸ್ತೆ ಕಾಮಗಾರಿ ಪ್ರಗತಿ ಹಂತದಲ್ಲಿದ್ದರೆ, ಹೊಸ ಕಾಮಗಾರಿಗಳೂ ಪ್ರಾರಂಭಗೊಂಡಿವೆ.

ಇನ್ನು 'ಅಕ್ಷರ ದಾಸೋಹ' ಕಾರ್ಯಕ್ರಮ ಕುರಿತು ಪ್ರಸ್ತಾಪಿಸುವುದಾದರೆ, ಇಂತಹ ಒಂದು ಉತ್ತಮ ಕಾರ್ಯಕ್ರಮವನ್ನು ದೇಶದ ಪ್ರಪ್ರಥಮ ಪ್ರಜೆಯಾಗಿರುವ ರಾಷ್ಟ್ರಪತಿ ಡಾ: ಎ.ಪಿ.ಜೆ. ಅಬ್ದುಲ್

ಕಲಾಂರವರೇ ಸ್ವತಃ ಮೆಚ್ಚಿಕೊಂಡಿದ್ದಾರೆ. ನಿಜವಾಗಿಯೂ ಇಡೀ ರಾಷ್ಟ್ರದಲ್ಲೇ ಶಿಕ್ಷಣ ಕ್ಷೇತ್ರದಲ್ಲಿ ಯಾವುದಾದರೂ ಒಳ್ಳೆಯ ಯೋಜನೆ ರೂಪಿಸಿದ್ದರೆ ಅದು ಈ ಕರ್ನಾಟಕ ಸರ್ಕಾರ, ಸನ್ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರವೆಂದು ನಾವು ಬಹಳ ಅಭಿಮಾನದಿಂದ ಇವೊತ್ತು ಹೇಳಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ವಿಶೇಷವಾಗಿ ತೋಟಗಳಲ್ಲಿ ವಾಸಿಸುವ ಸಣ್ಣ ರೈತರ ಮಕ್ಕಳು ಇವೊತ್ತು ಶಾಲೆಗೆ ಬಂದರೆ ಮಧ್ಯಾಹ್ನದ ಊಟಕ್ಕೆ ಅವರು ಎಲ್ಲಿಗೆ ಹೋಗಬೇಕು. ಅಥವಾ ಬೆಳಿಗ್ಗೆ ಶಾಲೆಗೆ ಬರುವಾಗ ತಮ್ಮ ಜೊತೆಯಲ್ಲಿ ಬುತ್ತಿ ತೆಗೆದುಕೊಂಡು ಬರಬೇಕಾಗುತ್ತದೆ. ನಮ್ಮ ಭಾಗದಲ್ಲಿ ಬುತ್ತಿ ಕಟ್ಟಿಕೊಂಡು ಬರುವುದೆಂದು ಹೇಳುತ್ತಾರೆ. ಅಂದರೆ, ತಮ್ಮ ಆಹಾರವನ್ನು ತಾವೇ ಕಟ್ಟಿಕೊಂಡು ಬರುವುದು. ಈ ರೀತಿಯ ವ್ಯವಸ್ಥೆಯಾದರೆ ಎಷ್ಟು ಕಷ್ಟವಾಗುತ್ತದೆಂದು ಗ್ರಾಮೀಣ ಪ್ರದೇಶದ ಜನರಿಗೆ ಅನುಭವವಾಗಿರುವ ವಿಷಯ. ಈ ಒಂದು ದಾಸೋಹ ಕಾರ್ಯಕ್ರಮದಿಂದಾಗಿ ಇವೊತ್ತು ಅಂತಹ ದೂರದ ಗ್ರಾಮೀಣ ಪ್ರದೇಶಗಳಿಂದ ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ವಿಶೇಷವಾಗಿ ಬಡವರ ಮಕ್ಕಳಿಗೆ ಅಕ್ಷರ ದಾಸೋಹ ಕಾರ್ಯಕ್ರಮದ ಮುಖಾಂತರ ಶಿಕ್ಷಣ ಕ್ಷೇತ್ರದಲ್ಲಿ ಇದೊಂದು ಅದ್ಭುತವಾದ ಕಾರ್ಯಕ್ರಮವಾಗಿದ್ದು ಇದು ಸರ್ಕಾರದ ಸಾಧನೆಯಾಗಿದೆ. ಈ ಕಾರ್ಯಕ್ರಮ ಇಡೀ ರಾಷ್ಟ್ರ ಮತ್ತು ವಿಶ್ವವ್ಯಾಪ್ತಿ ಮೆಚ್ಚುಗೆ ಗಳಿಸಿರುವುದನ್ನು ನೋಡುತ್ತಿದ್ದೇವೆ. ಸುಮಾರು ಒಂದು ಲಕ್ಷ ವಿದ್ಯಾರ್ಥಿಗಳು ಈ ಅಕ್ಷರ ದಾಸೋಹ ಕಾರ್ಯಕ್ರಮದ ಪ್ರಯೋಜನ ಪಡೆಯುತ್ತಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಒಂದು ಲಕ್ಷ ವಿದ್ಯಾರ್ಥಿಗಳೆಂದರೆ, ಅವರು ಮತ್ಯಾರೂ ಅಲ್ಲ, ನಿಜವಾಗಿಯೂ ಅವರು ಬಡವರ ಮಕ್ಕಳಾಗಿದ್ದು, ಬಡ ಕುಟುಂಬದಿಂದ ಬಂದವರಾಗಿದ್ದಾರೆ. ಸದರಿ ಯೋಜನೆ ಮುಖಾಂತರ ಸುಮಾರು ಒಂದು ಲಕ್ಷ ವಿದ್ಯಾರ್ಥಿಗಳಿಗೆ ಹೆಚ್ಚಿನ ರೀತಿಯಲ್ಲಿ ಶೈಕ್ಷಣಿಕ ವ್ಯವಸ್ಥೆಯನ್ನು ಕಲ್ಪಿಸುವಂತಾಯಿತೆಂದು ಇವೊತ್ತು ನಾವು ಅಭಿಮಾನದಿಂದ ಹೇಳಬೇಕಾಗುತ್ತದೆ. ಐದನೇ ತರಗತಿಯವರೆಗಿದ್ದ ಈ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಏಳನೇ ತರಗತಿಯವರೆಗೆ ವಿಸ್ತರಿಸುವ ಮುಖಾಂತರ ಅರವತ್ತು ಲಕ್ಷ ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನ ಹೊಂದುತ್ತಿದ್ದಾರೆ. ಖಾಸಗಿ ಸಂಸ್ಥೆಯ ರೆಸಿಡೆನ್ಸಿಯಲ್ ಶಾಲೆಗಳಲ್ಲಿ 50-100-200 ಮಕ್ಕಳಿದ್ದು, ಆ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ನಾವು ಊಟದ ವ್ಯವಸ್ಥೆ ಮಾಡಬೇಕಾದರೆ ಎಷ್ಟು ಕಷ್ಟವಾಗುತ್ತದೆಯು ಆ ಸಂಸ್ಥೆ ನಡೆಸುವವರನ್ನು ಕೇಳಿದರೆ ಹೇಳುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ 60 ಲಕ್ಷ ವಿದ್ಯಾರ್ಥಿಗಳಿಗೆ ಅಕ್ಷರ ದಾಸೋಹ ಕಾರ್ಯಕ್ರಮದ ಮುಖಾಂತರ ಆಹಾರ ನೀಡಲಾಗುತ್ತಿದ್ದು, ಅದರಲ್ಲಿ ಎಲ್ಲಿಯೋ ಒಂದು ಕಡೆ ಸಣ್ಣಪುಟ್ಟ ನ್ಯೂನತೆ, ಲೋಪ-ದೋಷಗಳಾದರೆ ಅದನ್ನೇ ಬೊಡ್ಡದಾಗಿ ಮಾಡಿ ಎತ್ತಿ ತೋರಿಸುವುದು ನಿಜವಾಗಿಯೂ ಸರಿಯಾದ ಕ್ರಮವಲ್ಲವೆಂದು ಈ ಮೂಲಕ ನಾನು ಎಲ್ಲಾ ವಿರೋಧ ಪಕ್ಷದ ನಾಯಕರಿಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು 'ಸ್ತ್ರೀ ಶಕ್ತಿ' ಕಾರ್ಯಕ್ರಮದ ಬಗ್ಗೆ ಅನೇಕ ಮಾನ್ಯ ಸದಸ್ಯರು ಏನೇನೋ ಅಪಾದನೆಗಳನ್ನು ಮಾಡಿದರು. ನಿಜವಾಗಿಯೂ ಈ ಭಾರತ ದೇಶದಲ್ಲಿ ಮೂಢ ನಂಬಿಕೆಗಳಿಂದಾಗಿ ಬಹಳಷ್ಟು ಸ್ತ್ರೀಯರ ಮೇಲೆ ಶೋಷಣೆಯಾಗುತ್ತಿರುವುದನ್ನು ನಾವು ನೋಡಿದ್ದೇವೆ. ಇತಿಹಾಸದ ಪುಟಗಳನ್ನು ನಾವು ತೆರೆದು ನೋಡಿದರೆ ಸತಿ ಸಹಗಮನ ಎನ್ನುವ ಒಂದು ಪದ್ಧತಿ ಇತ್ತು. ಪತಿ ತೀರಿಕೊಂಡರೆ ಅತನ ಜೊತೆ ಅತನ ಸತಿಯೂ ಚಿತೆಗೆ ಹಾರಿದರೆ ಆಕೆಗೆ ಮುಕ್ತಿ ಸಿಗುತ್ತದೆ. ಇಲ್ಲದಿದ್ದರೆ ಇಲ್ಲವೆಂಬ ನಂಬಿಕೆಯಿತ್ತು. ಇದರೊಂದಿಗೆ ಬಾಲ್ಯ ವಿವಾಹವೆಂಬ ಮೂಢ ನಂಬಿಕೆಯೂ ಇತ್ತು. ಈ ಎಲ್ಲಾ ಮೂಢ ನಂಬಿಕೆಗಳು ಇವೊತ್ತು ಕಾಯ್ದೆಬದ್ಧವಾಗಿ ನಿಬಂಧನೆಗೊಳಪಟ್ಟು ಹೋದರೂ ಸಹ ಇವೊತ್ತಿನ ನಮ್ಮ ಸಮಾಜದಲ್ಲಿ

ಪುರುಷರ ಕಪಿಮುಷ್ಠಿಯಲ್ಲಿ ಮಹಿಳೆಯರು ಸಿಲುಕಿರುವಂಥ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ.

5.30 ಪಿ.ಎಂ.

ಈ ಒಂದು ಸ್ತ್ರೀಶಕ್ತಿ ಯೋಜನೆ ಕರ್ನಾಟಕದಲ್ಲಿ ಪ್ರಾರಂಭವಾದಾಗಿನಿಂದ ಮಹಿಳೆಯರು ಉತ್ತೇಜಿತರಾದರು. ಈ ಸಮಾಜದಲ್ಲಿ ಮಹಿಳೆಯರು ಪ್ರತಿಯೊಂದು ಚಟುವಟಿಕೆಗಳಿಗೆ ಹೊರಗೆ ಬರಬೇಕು ಎನ್ನುವ ಸ್ಥೈರ್ಯವನ್ನು ಪಡೆದರು, ಅವರು ಆರ್ಥಿಕವಾಗಿ ಸ್ವಾವಲಂಬನೆಯನ್ನು ಪಡೆಯುವಂಥ ಸಂದರ್ಭದಲ್ಲಿ 150 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡಿರುವಂಥಾದ್ದನ್ನು ನೋಡಿದರೆ, ಒಂದು ಲಕ್ಷ ಸ್ತ್ರೀಶಕ್ತಿ ಸಂಘಗಳಲ್ಲಿ 15 ಲಕ್ಷ ಕುಟುಂಬಗಳು ಬಂದಿರುವಂಥಾದ್ದನ್ನು ನೋಡಿದರೆ ನಿಜವಾಗಿ ಇದೊಂದು, ಸ್ತ್ರೀಯರಿಗೆ ಶಕ್ತಿ ಕೊಟ್ಟಿರುವಂಥ ಅದ್ಭುತವಾದ ಕಾರ್ಯಕ್ರಮ ಎಂದು ನಾವು ಇದನ್ನು ಪ್ರಶಂಸೆ ಮಾಡಬೇಕಾಗುತ್ತದೆ. ಇಂಥ ಒಂದು ಸಂದರ್ಭದಲ್ಲಿ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಸ್ಥಾಪನೆ ಮಾಡುವ ಹೊಸ ಯೋಜನೆಯನ್ನು ಈ ಆಯವ್ಯಯದಲ್ಲಿ ಕೊಟ್ಟು, ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಬೇಕು, ಅವರು ಮಾಡುವಂಥ ಪ್ರತಿಯೊಂದು ಚಟುವಟಿಕೆಗಳಿಗೆ ಅರ್ಥಿಕ ಸಹಾಯ ಸಿಗಬೇಕು ಎನ್ನುವ ದೃಷ್ಟಿಯಿಂದ ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಸ್ಥಾಪನೆ ಮಾಡುವಂಥ ಘೋಷಣೆ ಮಾಡಿರುವುದನ್ನು ಸ್ವಾಗತ ಮಾಡಬೇಕು ಎನ್ನುವ ವಿಷಯವನ್ನು ನಾನು ಇಲ್ಲಿ ಹೇಳುತ್ತಿದ್ದೇನೆ.

ಇನ್ನು ಇಂದಿರಾ ಜ್ಯೋತಿ ಯೋಜನೆ. ನಿಜವಾಗಿಯೂ ಗ್ರಾಮೀಣ ಪ್ರದೇಶಗಳಲ್ಲಿರುವವರು ಬಡವರು. ಅವರು ಉರುವಲನ್ನು ಹುಡುಕಿಕೊಂಡು ಎರಡು ಕಿ.ಮೀ.ಗಳಿಗಿಂತಲೂ ಹೆಚ್ಚು ದೂರ ಹೋಗಬೇಕು. ಉರುವಲನ್ನು ಎಲ್ಲೆಲ್ಲಿಯೋ ಹುಡುಕಿ. ಅದನ್ನು ಕಡಿದು ತೆಗೆದುಕೊಂಡು ಬರಬೇಕು. ಗ್ರಾಮೀಣ ಮಹಿಳೆಯರು ಅದರಲ್ಲೇ ಇಡೀ ದಿನವನ್ನು ಕಳೆಯುವಂಥಾದು ಆಗುತ್ತಿದೆ. ಅಡುಗೆ ಮಾಡುವಾಗ ಬರುವ ಹೊಗೆಯಿಂದ ಅವರ ಕಣ್ಣುಗಳ ಮೇಲೆ ಮತ್ತು ಆರೋಗ್ಯದ ಮೇಲೆ ದುಷ್ಪರಿಣಾಮ ಆಗುವಂಥಾದ್ದು ಇದೆ. ಇದನ್ನು ಹೋಗಲಾಡಿಸಬೇಕೆಂದು, ಸ್ತ್ರೀಶಕ್ತಿ ಸಂಘದಲ್ಲಿರುವ ಬಡ ಮಹಿಳೆಯರಿಗೆ ಮುಂದಿನ ಒಂದು ವರ್ಷದಲ್ಲಿ ಐದು ಲಕ್ಷ ಅಡುಗೆ ಸಿಲಿಂಡರ್‌ಗಳನ್ನು ಒದಗಿಸಿ ಕೊಡುವಂಥ ಕಾರ್ಯಕ್ರಮವನ್ನು ಆಯವ್ಯಯದಲ್ಲಿ ಘೋಷಣೆ ಮಾಡಿದ್ದಾರೆ ಎಂದರೆ, ಬಡವರಿಗೆ ಸಹಾಯ ಮಾಡುವಂಥ ಕಾರ್ಯಕ್ರಮ ಇದಕ್ಕಿಂತ ಬೇರೊಂದಿಲ್ಲ ಎಂದು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಇನ್ನು, ಬಡವರಿಗೆ ಮನೆ ಕೊಡುವಂಥ ಕಾರ್ಯಕ್ರಮ. ಈ ಹಿಂದಿನ ಎಲ್ಲಾ ಸರ್ಕಾರಗಳು ಬಡವರಿಗೆ ಎಷ್ಟು ಮನೆಗಳನ್ನು ಕೊಟ್ಟಿವೆ. ಈ ಸರ್ಕಾರ ಎಷ್ಟು ಕೊಟ್ಟಿದೆ ಎಂದು ನೋಡಬೇಕು. ಇವತ್ತು ಯಾವ ಬಡವನೂ ಗುಡಿಸಿಲಿನಲ್ಲಿರಬಾರದು, ಯಾವ ಬಡವನೂ ಟೆಂಟ್‌ನಲ್ಲಿರಬಾರದು, ಯಾವ ಬಡವನೂ ಫುಟ್‌ಪಾತ್‌ನಲ್ಲಿರಬಾರದು, ರಾಜ್ಯದಲ್ಲಿ ಬೇಕಾದಷ್ಟು ಬಡವರಿದ್ದರೂ ಸಹ ಅವರೆಲ್ಲರಿಗೂ ಒಂದು ಸೂರು ಇರಬೇಕು ಎಂದು ಈ ಸರ್ಕಾರ ಪ್ರಾರಂಭದಲ್ಲಿ ಘೋಷಣೆ ಮಾಡಿದ ಪ್ರಕಾರ, ಕೊಟ್ಟು ಆಶ್ವಾಸನೆಯ ಪ್ರಕಾರ, ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಎಂಟು ಲಕ್ಷ ಮನೆಗಳನ್ನು ನಿರ್ಮಾಣ ಮಾಡುವುದರ ಮುಖಾಂತರ ಈ ಸರ್ಕಾರ ತನ್ನ ಮಾತನ್ನು ಉಳಿಸಿಕೊಂಡಿದೆ ಮತ್ತು ನಿಜವಾಗಿಯೂ ಬಡವರಿಗೆ ಸೂರನ್ನು ಒದಗಿಸಿಕೊಟ್ಟಿದೆ ಎನ್ನುವ ಮಾತನ್ನು ನಾವು ಹೇಳಬೇಕಾಗುತ್ತದೆ. ಬಡವರಿಗೆ ಮನೆಗಳನ್ನು ಕೊಡುವ ಈ ಯೋಜನೆಯ ಜೊತೆಗೆ 'ನವಗ್ರಾಮ' ಎನ್ನುವ ಯೋಜನೆಯೂ ಇದೆ. ಅವರಿಗೆ ಕೇವಲ ಮನೆಗಳನ್ನು ಕೊಟ್ಟರೆ ಆಗುವುದಿಲ್ಲ. ಅವರಿಗೆ

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕೊಡಬೇಕೆಂದು 'ನವಗ್ರಾಮ' ಯೋಜನೆಯನ್ನು ತಂದಿದ್ದಾರೆ. ಅಲ್ಲಿ ವಿದ್ಯುಚ್ಛಕ್ತಿಯ ವ್ಯವಸ್ಥೆ ಇರಬೇಕು, ಕುಡಿಯುವ ನೀರಿನ ವ್ಯವಸ್ಥೆ ಇರಬೇಕು, ಸಮುದಾಯ ಭವನಗಳು ನಿರ್ಮಾಣವಾಗಬೇಕು, ರಸ್ತೆಗಳು ನಿರ್ಮಾಣವಾಗಬೇಕು. ಅನೇಕ ಕಡೆಗಳಲ್ಲಿ ಆಗಿರುವ ನವಗ್ರಾಮಗಳನ್ನು ನಾವು ನೋಡಿದರೆ, ಅಲ್ಲಿ ಅದ್ಭುತವಾದ, ಸುಂದರವಾದ ಸಣ್ಣ ಸಣ್ಣ ಗ್ರಾಮಗಳು ಅಥವಾ ನಿವೇಶನಗಳು ಉದ್ಭವವಾಗಿರುವುದನ್ನು ನೋಡಿದರೆ ನಿಜವಾಗಿಯೂ ಸಂತೋಷವಾಗಿರುತ್ತದೆ. ಬಡವರಿಗೆ ಇಂಥ ಅವಕಾಶಗಳನ್ನು ಇಂಥ ಸೌಲಭ್ಯಗಳನ್ನು ಈ ಬಜೆಟ್‌ನಲ್ಲಿ ಕಲ್ಪಿಸಿಕೊಟ್ಟಿರುವಂಥಾದ್ದನ್ನು ನಾವು ಪ್ರಶಂಸೆ ಮಾಡಬೇಕಾಗುತ್ತದೆ.

ಇನ್ನು ಕೃಷಿ ಕ್ಷೇತ್ರದ ಬಗ್ಗೆ ಹೇಳಬೇಕಾದರೆ, ಇದು ರೈತರ ಪರವಾಗಿ ಇರುವಂಥ ಬಜೆಟ್ ಎಂದು ನಾನು ಪ್ರಾರಂಭದಲ್ಲೇ ಹೇಳಿದೆ. ಏಕೆಂದರೆ ಈಗಾಗಲೇ 880 ಕೋಟಿ ರೂಪಾಯಿಗಳ ಪ್ಯಾಕೇಜನ್ನು ರೈತರಿಗಾಗಿ ಘೋಷಿಸಿದ್ದು, ಅದನ್ನು ಸರಿಯಾಗಿ ರೈತರಿಗೆ ಮುಟ್ಟಿಸಬೇಕೆಂದು ಕೃಷಿ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವಂಥಾದ್ದು, ವಿಫಲ ಬಾವಿಗಳಿಗೆ ಪರಿಹಾರ ಒದಗಿಸುವಂಥಾದ್ದು, ಪಂಪ್‌ಸೆಟ್‌ಗಳ ವಿದ್ಯುಚ್ಛಕ್ತಿ ಶುಲ್ಕ ಮನ್ನಾ ಮಾಡುವಂಥಾದ್ದು, ಭೂ ಕಂದಾಯ ಮತ್ತು ನೀರಾವರಿ ದರಗಳಲ್ಲಿ ರಿಯಾಯಿತಿಯನ್ನು ಘೋಷಣೆ ಮಾಡಿರುವಂಥಾದ್ದು, ಬೀಜ ಮತ್ತು ಕೃಷಿ ಪೂರಕಗಳಿಗೆ ಸಹಾಯ ಧನವನ್ನು ಒದಗಿಸುವಂಥಾದ್ದು ಈ ಎಲ್ಲಾ ಅಂಶಗಳನ್ನೊಳಗೊಂಡ 880 ಕೋಟಿ ರೂಪಾಯಿಗಳ ಪ್ಯಾಕೇಜ್ ರೈತರಿಗೆ ನಿಜವಾದ ಕೊಡುಗೆ ಎಂಬುದನ್ನು ಒಪ್ಪಬೇಕಾಗುತ್ತದೆ. ಇದರ ಜೊತೆಗೆ, ಬೆಳೆ ವಿಮೆಗಾಗಿ 103 ಕೋಟಿ ರೂಪಾಯಿಗಳನ್ನು ಈ ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಬೆಳೆ ವಿಮೆಯ ಮುಖಾಂತರ ರೈತರಿಗೆ ಸಹಾಯ ಮಾಡುವಂಥ ಪ್ರಾಮಾಣಿಕ ಪ್ರಯತ್ನ ಈ ಆಯವ್ಯಯದಲ್ಲಿ ಆಗಿದೆ ಎಂದು ನಾವು ಹೇಳಬೇಕಾಗುತ್ತದೆ. ಅದೇ ರೀತಿ, ಬರಗಾಲದಿಂದ ತತ್ತರಿಸಿರುವಂಥ ಬಡವರಿಗೆ 600 ಕೋಟಿ ರೂಪಾಯಿಗಳ ಪರಿಹಾರ ಕೊಡುವಂಥಾದ್ದು ಅಂದರೆ 31ನೇ ಮಾರ್ಚ್ 2003ರವರೆಗಿನ ಎಲ್ಲಾ ವಿದ್ಯುಚ್ಛಕ್ತಿ ಬಾಕಿ ಮನ್ನಾ ಮಾಡುವುದರ ಮೂಲಕ ಈ ಸರ್ಕಾರ ನಿಜವಾಗಿ ಬರಗಾಲದ ಪರಿಸ್ಥಿತಿಯಲ್ಲಿರುವ ರೈತರಿಗೆ ಸಹಾಯ ಹಸ್ತ ನೀಡಿದೆ ಎಂದು ನಾವು ಬಹಳ ಆತ್ಮ ಗೌರವದಿಂದ ಹೇಳುವಂಥ ವಿಷಯ ಇದಾಗಿದೆ.

ಕೃಷಿ ಕ್ಷೇತ್ರ ನಿಜವಾಗಿಯೂ ಬಹಳ ಮುಖ್ಯವಾದ ಒಂದು ಕ್ಷೇತ್ರ. ಈ ಕ್ಷೇತ್ರದಲ್ಲಿ, ಕರ್ನಾಟಕ ಕೃಷಿ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡುವುದರ ಮುಖಾಂತರ ಕೃಷಿಕರಿಗೆ, ರೈತರಿಗೆ ಸರಿಯಾದ ಮತ್ತು ವೈಜ್ಞಾನಿಕವಾದ ಪದ್ಧತಿಯನ್ನು ಕೊಡಬೇಕೆಂದು ಮಾಡಿದ್ದಾರೆ, ಅವೈಜ್ಞಾನಿಕ ಬೇಸಾಯ ಪದ್ಧತಿಯನ್ನು ಕಡಿಮೆ ಮಾಡಲು, ಇಳುವರಿ ಕಡಿಮೆಯಾಗುವಂಥಾದ್ದನ್ನು ತಡೆಯಲು, ನಿಜವಾದ ತಂತ್ರಜ್ಞಾನವನ್ನು ರೈತರಿಗೆ ಮುಟ್ಟಿಸಲು, ಭೂಮಿಯ ಫಲವತ್ತತೆಯನ್ನು ಕಾಯ್ದುಕೊಳ್ಳಲು, ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು, ನೀರಿನ ಸದ್ಬಳಕೆಯಾಗಬೇಕು ಮುಂತಾದ ಕೃಷಿಗೆ ಸಂಬಂಧಿಸಿದ ಮಹತ್ವವಾದ ವಿಷಯಗಳನ್ನು ರೈತರಿಗೆ ಮುಟ್ಟಿಸಲು ಮತ್ತು ಅವರಿಗೆ ಸಹಾಯಕಾರಿಯಾಗಬೇಕು ಎನ್ನುವ ನಿರ್ಣಯ ಕೈಗೊಂಡು ಈ ಒಂದು ಕರ್ನಾಟಕ ಕೃಷಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲು ನಿರ್ಣಯ ಕೈಗೊಂಡಿರತಕ್ಕಂಥಾದ್ದಾಗಿದೆ. ಈ ಎಲ್ಲಾ ವಿಷಯಗಳೂ ಸಹ ರೈತರ ಪರವಾಗಿರುವುದರಿಂದ ಇದು ರೈತರ ಪರವಾಗಿದೆ ತಕ್ಕಂಥ ಬಜೆಟ್ ಎಂದು ಹೇಳಿ ನಾನು ಇದನ್ನು ಸ್ವಾಗತ ಮಾಡುತ್ತೇನೆ.

ಇನ್ನು ನನ್ನ ಒಂದು ವೈಯಕ್ತಿಕವಾದ ವಿಚಾರವೆಂದರೆ ಮತ್ತು ಈ ವಿಚಾರವಾಗಿ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುವುದೇನೆಂದರೆ, ಕೃಷಿ ಪ್ರಧಾನವಾಗಿರುವಂಥ ಈ ಭಾರತ

ದೇಶದಲ್ಲಿ, ನೂರಕ್ಕೆ ಎಪ್ಪತ್ತೈದರಷ್ಟು ಜನರ ಕಸುಬು ಒಕ್ಕಲುತನ ಅಥವಾ ವ್ಯವಸಾಯ ಅಥವಾ ಕೃಷಿ ಎನ್ನಬಹುದು. ಇಂಥ ಒಂದು ಮಹತ್ವವಾದ ಕ್ಷೇತ್ರದ ಬಗ್ಗೆ ಪ್ರತಿಯೊಂದು ಮಕ್ಕಳಿಗೂ ಅರಿವಿರಬೇಕು. ಅದರಿಂದ, ಶೈಕ್ಷಣಿಕ ವಲಯದಲ್ಲಿ ಮಕ್ಕಳಿಗೆ ಕೃಷಿ ಕ್ಷೇತ್ರದ ಬಗ್ಗೆ ತಿಳುವಳಿಕೆ ಮೂಡಿಸಬೇಕು. ಏಕೆಂದರೆ ಇವತ್ತು ಪ್ರತಿಯೊಬ್ಬ ರೈತ ವೈಜ್ಞಾನಿಕವಾಗಿ ಒಕ್ಕಲುತನ ಮಾಡಬೇಕಾದರೆ ಭೂಮಿ ಎಂದರೇನು, ಭೂಮಿಯ ಗುಣಧರ್ಮವೇನು, ನೀರಿನ ಗುಣಧರ್ಮವೇನು, ಹವಾಮಾನವೇನು, ಬೆಳೆಯ ರಕ್ಷಣೆ ಹೇಗೆ ಮಾಡಬೇಕು, ಬೆಳೆಯ ಗುಣಧರ್ಮವೇನು, ಬೀಜದ ಗುಣ ಧರ್ಮವೇನು ಈ ಎಲ್ಲಾ ಅಂಶಗಳನ್ನು ಬಲ್ಲವನಾಗಿರಬೇಕು, ಯಾವ ರೈತ ಇವುಗಳನ್ನೆಲ್ಲ ಬಲ್ಲವನಾಗಿರುತ್ತಾನೆ, ಆತನು ಒಬ್ಬ ಪ್ರಗತಿಪರ ರೈತನಾಗಲು ಸಾಧ್ಯ. ಅಂಥ ಪ್ರಗತಿಪರ ರೈತನನ್ನು ನಾವು ತಯಾರು ಮಾಡಬೇಕಾದರೆ, ನಾವು ಪ್ರಾಥಮಿಕ ಶಿಕ್ಷಣದಿಂದಲೂ ಕೃಷಿಯ ಬಗ್ಗೆ ಒಂದು ಸಬ್ಜೆಕ್ಟ್ ಇರಬೇಕು ಎನ್ನುವುದು ನನ್ನ ವೈಯಕ್ತಿಕ ಭಾವನೆ. ಏಕೆಂದರೆ ಅಕ್ಷರಾಭ್ಯಾಸದ ಜೊತೆಗೇ ಭೂಮಿ, ನೀರು, ಹವಾಮಾನ ಮತ್ತು ಬೆಳೆ ಇವುಗಳನ್ನು ಕಲಿತರೆ, ಯಾವ ವಿದ್ಯಾರ್ಥಿಯೂ ಮುಂದೆ ಶಿಕ್ಷಣ ಕಲಿತು ನಿರುದ್ಯೋಗಿಯಾಗುವಂಥ ಅವಕಾಶ ಬರುವುದಿಲ್ಲ. ಹೀಗೆ ಮಾಡುವುದರಿಂದ ನಿರುದ್ಯೋಗತನ ಹೋಗುತ್ತದೆ, ಗ್ರಾಮೀಣ ಅಭಿವೃದ್ಧಿಯಾಗುವಂಥಾದ್ದು ಆಗುತ್ತದೆ, ಆದಾಯ ಹೆಚ್ಚಾಗುವಂಥಾದ್ದು ಆಗುತ್ತದೆ. ನಾವು ಶೈಕ್ಷಣಿಕ ಕ್ಷೇತ್ರದ ಉಪಯೋಗ ಮಾಡಿಕೊಂಡು ಪ್ರಗತಿಪರ ರೈತರನ್ನು ತಯಾರು ಮಾಡುವಂಥಾದ್ದು ಆಗಬೇಕು ಎನ್ನುವ ನನ್ನ ವೈಯಕ್ತಿಕ ಅಭಿಪ್ರಾಯವನ್ನು ನಾನು ಇಲ್ಲಿ ಮಂಡನೆ ಮಾಡುತ್ತೇನೆ.

ಇನ್ನು, ಚಿಕ್ಕ ನೀರಾವರಿಗೆ 100 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದನ್ನು ನಾನು ಇಲ್ಲಿ ಸ್ವಾಗತ ಮಾಡುತ್ತೇನೆ. ಚಿಕ್ಕ ನೀರಾವರಿಯು ಬೃಹತ್ ನೀರಾವರಿಗಿಂತ ಮಹತ್ತರವಾಗಿರುವಂಥ ಒಂದು ಇಲಾಖೆ. ನೀರಾವರಿಯಿಂದ ನಾವು ಅಂತರ್ಜಲವನ್ನು ಹೆಚ್ಚು ಮಾಡಲು ಸಾಧ್ಯವಿದೆ, ಚಿಕ್ಕ ನೀರಾವರಿಯಿಂದ ಕಡಿಮೆ ಅನುದಾನದಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲು ಸಾಧ್ಯವಿದೆ, ಚಿಕ್ಕ ನೀರಾವರಿಯಿಂದ ಯಾವುದೇ ಯೋಜನೆಗಳನ್ನಾದರೂ ಆದಷ್ಟು ಬೇಗನೆ ಮುಗಿಸಲು ಸಾಧ್ಯವಿದೆ, ಚಿಕ್ಕ ನೀರಾವರಿಯು ಕುಡಿಯುವ ನೀರಿಗೂ ಸಹಾಯಕಾರಿಯಾಗಿದೆ. ಚಿಕ್ಕ ನೀರಾವರಿಯಲ್ಲಿ ಅನೇಕ ಯೋಜನೆಗಳನ್ನು, ಕಾಮಗಾರಿಗಳನ್ನು ಈ ಬರಪರಿಹಾರ ಯೋಜನೆಯಡಿಯಲ್ಲಿ ತೆಗೆದುಕೊಂಡು ಜನರಿಗೆ ಉದ್ಯೋಗ ಕೊಡುವಂಥಾದ್ದಕ್ಕೆ 100 ಕೋಟಿ ರೂಪಾಯಿಗಳನ್ನು ಈ ಆಯವ್ಯಯದಲ್ಲಿ ಒದಗಿಸಿರುವಂಥಾದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ಒಂದು ನೂರು ಕೋಟಿ ರೂಪಾಯಿಗಳು ಇದಕ್ಕೆ ಸಾಲದು. ಚಿಕ್ಕ ನೀರಾವರಿಯ ಅನುದಾನವನ್ನು ಇನ್ನೂ ಜಾಸ್ತಿ ಮಾಡಬೇಕು ಹಾಗೂ ಚಿಕ್ಕ ನೀರಾವರಿಯ ಎಲ್ಲಲ ಯೋಜನೆಗಳನ್ನು ಪೂರ್ಣಗೊಳಿಸಬೇಕು ಎಂದು ನಾನು ಇಲ್ಲಿ ವಿನಂತಿ ಮಾಡುತ್ತೇನೆ. ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ನಾಲ್ಕು ನಾಲಾ ಬಂದರುಗಳು ಮತ್ತು ನಾಲ್ಕು ಕೆರೆಗಳು ಮಂಜೂರಾತಿಯಾಗಿದೆ. ಆದರೆ ಅನುದಾನದ ಕೊರತೆಯಿಂದ ಇವತ್ತು ಅವುಗಳು ಪ್ರಗತಿಯಲ್ಲಿ ಇಲ್ಲ. ಈ ಅವಕಾಶವನ್ನು ಉಪಯೋಗಿಸಿಕೊಂಡು ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅಥವಾ ಸಂಬಂಧಪಟ್ಟ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಈಗ ಕೊಟ್ಟಿರುವಂಥ ಅನುದಾನದಲ್ಲಿ ನಮ್ಮ ತಾಲ್ಲೂಕಿನಲ್ಲಿ ಮಂಜೂರಾತಿಯಾಗಿರುವ ಕಾಮಗಾರಿಗಳನ್ನು ಆದಷ್ಟು ಬೇಗನೆ ತೀವ್ರಗತಿಯಿಂದ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕ ಎನ್ನುವ ವಿಚಾರವನ್ನು ನನ್ನ ಕ್ಷೇತ್ರದ ಪರವಾಗಿ ವಿನಂತಿ ಮಾಡುತ್ತೇನೆ.

ಕೊನೆಯದಾಗಿ, ಇದು ಬಡವರ ಪರವಾಗಿರುವಂಥ ಆಯವ್ಯಯ. ಗಂಗಾ ಕಲ್ಯಾಣ ಯೋಜನೆಯ ಬಗ್ಗೆ ಹೇಳಬೇಕೆಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ 10 ಸಾವಿರ ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಯನ್ನು ಕಲ್ಪಿಸುವ ಘೋಷಣೆಯನ್ನು ಈ ಆಯವ್ಯಯದಲ್ಲಿ ಮಾಡಿರುವುದನ್ನು ನೋಡಿದರೆ ಇದು ನಿಜವಾಗಿ ಬಡವರ ಪರವಾಗಿದೆ ಎಂದು ಹೇಳಬೇಕಾಗುತ್ತದೆ. ಬಡವರಿಗೆ ಈ ಯೋಜನೆಯಲ್ಲಿ ಕೇವಲ ಕೊಳವೆ ಬಾವಿಗಳನ್ನು ಕೊಡುವುದಷ್ಟೇ ಅಲ್ಲ, ಅವುಗಳಿಗೆ ವಿದ್ಯುದ್ದೀಕರಣ ಮಾಡಲು, ವಿದ್ಯುತ್ ಪೂರೈಕೆಯ ಜವಾಬ್ದಾರಿಯನ್ನು ಸರ್ಕಾರ ತಾನೇ ತೆಗೆದುಕೊಂಡಿರುವಂಥಾದ್ದು ನಿಜವಾಗಿಯೂ ಬಹಳಷ್ಟು ಬಡ ವರ್ಗದವರಿಗೆ ಸಹಾಯಕಾರಿಯಾಗಿದೆ. ಇದರ ಜೊತೆಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಅಲ್ಪಸಂಖ್ಯಾತರು, ಹಿಂದುಳಿದವರು, ಕುಶಲಕರ್ಮಿಗಳು, ಮೀನುಗಾರರು ಇವರೆಲ್ಲರಿಗೂ 5 ಸಾವಿರ ರೂಪಾಯಿಗಳ ಮಾರ್ಜಿನ್ ಮನಿ ಘೋಷಣೆ ಮಾಡಿರುವಂಥಾದ್ದು ಬಹಳ ಮಹತ್ತರವಾದುದಾಗಿದೆ. ಇವತ್ತು ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕಾದರೆ ಮಾರ್ಜಿನ್ ಮನಿಯನ್ನು ಎಲ್ಲಿಂದ ತರಬೇಕು ಎನ್ನುವಂಥ ವಿಚಾರ ಎಲ್ಲರಲ್ಲೂ ಹುಟ್ಟಿಕೊಂಡಿರುವಂಥದ್ದು ನಮಗೆಲ್ಲ ತಿಳಿದಿರುವಂಥ ವಿಚಾರವಾಗಿದೆ. ಈ ಬರಗಾಲದ ಪರಿಣಾಮದಲ್ಲಿ ಇವತ್ತು ಒಂದು ಪೈಸೆ ಸಹ ಬಡವರು/ರೈತರು ಎಲ್ಲಿಂದಾದರೂ ಪಡೆಯಬೇಕಾದರೆ ಬಹಳ ಕಷ್ಟವಾಗುತ್ತದೆ. ಅಂತಹ ಒಂದು ಸಂದರ್ಭದಲ್ಲಿ ಇವತ್ತು ಬಡವರಿಗೆ, ಎಲ್ಲಾ ವರ್ಗದ ಬಡವರಿಗೆ 5 ಸಾವಿರ ರೂಪಾಯಿಗಳ ಮಾರ್ಜಿನ್ ಹಣವನ್ನು ಈ ಸರ್ಕಾರ ಕೊಡುವಂಥದ್ದು ಇದು ಬಡವರಿಗೆ ಅಮೂಲ್ಯವಾದ ಕೊಡುಗೆ ಎಂದು ಹೇಳುತ್ತಾ, ಇದು ಬಡವರ ಪರವಾಗಿರುವ ಬಜೆಟ್, ಈ ಸಾಮಾಜಿಕ ನ್ಯಾಯ ಒದಗಿಸುವಂಥದ್ದರಲ್ಲಿ ಮಹತ್ತರ ಹೆಜ್ಜೆ ಎಂದು ಈ ಸಂದರ್ಭದಲ್ಲಿ ಹೇಳಿ, ಒಂದು ಮಾತನ್ನು ನಾನು ಹೇಳಬೇಕಾಗುತ್ತದೆ. ಯಾವಾಗಲೂ ವಿಪತ್ತು ಬಂದಾಗ ಎಲ್ಲರೂ ಕೂಡಿ ಅದನ್ನು ನಿಭಾಯಿಸಬೇಕು. ನಿಜವಾಗಿಯೂ ಕೇಂದ್ರ ಸರ್ಕಾರ ಮಾಡಿರುವಂಥ ಮಲತಾಯಿ ಧೋರಣೆಯಿಂದ ನಮ್ಮ ರಾಜ್ಯಕ್ಕೆ ಬಹಳ ಕಷ್ಟ ತಗುಲಿದೆ. ಆಂಧ್ರ ಪ್ರದೇಶದವರಿಗೆ ಬರಗಾಲದ ಸಲುವಾಗಿ ಕೇಂದ್ರದವರು ಎಷ್ಟು ಕಾಳು ಕೊಟ್ಟರು. ನಮ್ಮ ರಾಜ್ಯಕ್ಕೆ ಎಷ್ಟು ಕೊಟ್ಟರು ಎನ್ನುವುದನ್ನು ನೋಡಬಹುದು. ವಿಶ್ವಬ್ಯಾಂಕಿನಿಂದ ಸಾಲ ವಿತರಣೆ ಮಾಡುವ ಸಂದರ್ಭದಲ್ಲಿ ಏನಾಯಿತು ಎನ್ನುವಂಥದ್ದನ್ನು ಶ್ರೀ ರಾಮದಾಸ್‌ರವರು ಹೇಳಿದ್ದಾರೆ. ನಾನು ಇದಕ್ಕೆ ಉತ್ತರ ಕೊಡುವುದಕ್ಕಿಂತಲೂ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ಸರಿಯಾಗಿ ಉತ್ತರ ಕೊಡುತ್ತಾರೆ. ಯಾವ ರೀತಿ ಯುಟಿಲೈಜೇಷನ್ ಮಾಡಿದರು ಎನ್ನುವಂಥದ್ದರ ಬಗ್ಗೆ ಸರಿಯಾದ ವಿಶ್ಲೇಷಣೆಯನ್ನು ಕೊಡುತ್ತಾರೆ. ಇವತ್ತು ಕರ ವಿನಾಯಿತಿ ಮಾಡುವಂಥದ್ದರ ಬಗ್ಗೆ ಹೇಳುವುದಾದರೆ, ಈ ಪೆಟ್ರೋಲ್ ಡೀಸಲ್‌ಗೆ 400 ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡುವುದರ ಜೊತೆಗೆ ಕರ ವಿನಾಯಿತಿಯನ್ನು ಮಾಡಿದರು. ತಿಂಗಳಿಗೊಮ್ಮೆ ಎರಡು ತಿಂಗಳಗೊಮ್ಮೆ ಆರು ತಿಂಗಳಿಗೊಮ್ಮೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಆಗುವಂಥದ್ದನ್ನು ನಾವು ಬೇರೆ ಕಡೆ ನೋಡುತ್ತೇವೆ. ಇದನ್ನು ಕೇಂದ್ರ ಸರ್ಕಾರ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲವೇ ? ಜನರಿಗೆ ಪ್ರತಿನಿತ್ಯ ಬೇಕಾಗುವಂಥ ಇಂಥ ಅವಶ್ಯಕ ವಸ್ತುಗಳಿಗೆ ಬೆಲೆಯನ್ನು ನಿಯಂತ್ರಣ ಮಾಡುವಲ್ಲಿ ನಮ್ಮ ಸರ್ಕಾರ ಮಾತ್ರ 400 ಕೋಟಿ ರೂಪಾಯಿಗಳ ಪರಿಹಾರವನ್ನು ಒದಗಿಸಿದೆ ಎನ್ನುವಂಥ ವಿಷಯವನ್ನು ಇಲ್ಲಿ ಹೇಳುತ್ತಾ ಬಹುಶಃ ಇದು ನನ್ನ ಕೊನೆಯ ಭಾಷಣವಾಗಿ ಇರುವುದರಿಂದ ನಾನು ವೈಯಕ್ತಿಕವಾಗಿ ಹೇಳುವ್ಯವಾದರೆ, ಏನೋ ಸದನದಲ್ಲಿ ಜನಪರವಾದ ಚರ್ಚೆಗಳನ್ನು ಮಾಡಲಿ ಜನರ[illegible]

ಚಿಂತನೆಗಳನ್ನು ಮಾಡಲಿ, ರಾಜ್ಯದ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಲಿ ಎಂದು ಹೇಳಿ ನಮಗೆ ಜನರು ಜವಾಬ್ದಾರಿ ಕೊಟ್ಟು ಇಲ್ಲಿಗೆ ಆರಿಸಿ ಕಳುಹಿಸಿರುತ್ತಾರೆ. ಆದರೆ ಒಂದು ವಿಷಾದನೀಯ ವಿಷಯ ಏನೆಂದರೆ, ಅನೇಕ ಅಧಿವೇಶನಗಳನ್ನು ಅದೇನೋ ಈ ಕಾಗದ, ಆ ಕಾಗದ ಎಂದು ಸಮಯವನ್ನು ಅನಾವಶ್ಯಕ ವಿಷಯಗಳ ಕಡೆಗೆ ಚರ್ಚೆ ಮಾಡಿ ಕಳೆದುಹೋಯಿತು, ಅದು ಬಂಗಾಲದ ಬಗ್ಗೆಯಾಗಲಿ, ಕುಡಿಯುವ ನೀರಿನ ಬಗ್ಗೆಯಾಗಲಿ, ಅಭಿವೃದ್ಧಿ ಕಡೆಗೆ ಹೆಚ್ಚಿನ ಸಮಯ ಹೋಗಲಿಲ್ಲ ಎನ್ನುವಂಥದ್ದು ಒಂದು. ಈ ಜವಾಬ್ದಾರಿಯನ್ನು ನಾವು ಇವತ್ತು ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲೀ ಬುದ್ದಿಜೀವಿಗಳಾಗಲಿ ಎಲ್ಲಾ ಸಂಬಂಧಿತರು ಅದು ಕಾರ್ಯಂಗ, ನ್ಯಾಯಾಂಗ ಶಾಸಕಾಂಗಳವರು ತಮ್ಮ ಜವಾಬ್ದಾರಿಯನ್ನು ತಮ್ಮ ಕರ್ತವ್ಯವನ್ನು ಅರ್ಥಮಾಡಿಕೊಂಡು ಮುಂದುವರೆದು ಈ ರಾಜ್ಯದ ಜನತೆಗೆ ಒಂದು ಒಳ್ಳೆಯ ನಾಡನ್ನು ಕೊಡುವಂಥ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ, ಒಟ್ಟಿನಲ್ಲಿ ಈ ಒಂದು ಆಯವ್ಯಯ ಉತ್ತಮವಾಗಿರುವಂಥ ಆಯವ್ಯಯ, ಮಹತ್ವದ ಆಯವ್ಯಯ, ಇದನ್ನು ನಾನು ಬೆಂಬಲಿಸುತ್ತಾ ಸರ್ಕಾರವನ್ನೂ ಮಾನ್ಯ ಮುಖ್ಯಮಂತ್ರಿಗಳನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತಾ ತಾವು ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†**ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ)** : ಮಾನ್ಯ ಛೇರ್ಮನ್‌ರವರೇ, ಸನ್ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂಥ ಈ 5ನೇ ಆಯವ್ಯಯ ಪತ್ರ ಅತ್ಯಂತ ಚೈತನ್ಯಶೀಲವಾದಂಥ ಕರ್ನಾಟಕದ ಮುನ್ನೋಟದ ಇಟ್ಟುಕೊಂಡು ಬಹಳ ಉತ್ತಮವಾದಂಥ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ ಎನ್ನತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡುತ್ತಾ ಉತ್ತಮ ಆಯವ್ಯಯ ಪತ್ರವನ್ನು ಮಂಡಿಸಿದಂಥ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತಾ, ನಮ್ಮಲ್ಲಿ ಈ ಆಯವ್ಯಯ ಪತ್ರದಲ್ಲಿ ಅವಕಾಶದಿಂದ ವಂಚಿತರಾದಂಥ ವರ್ಗಕ್ಕೆ ಸಾಕಷ್ಟು ಅವಕಾಶಗಳನ್ನು ಕೊಡತಕ್ಕಂಥ ಅನೇಕ ಪ್ರಸ್ತಾಪಗಳು ಇವತ್ತು ಇದೆ. ನಮ್ಮ ಸನ್ಮಾನ್ಯ ಎಸ್.ಎಂ. ಕೃಷ್ಣರವರು ಈ ರಾಜ್ಯದ ಮುಖ್ಯಮಂತ್ರಿಗಳು ಆದನಂತರ ಶೈಕ್ಷಣಿಕ ಕ್ಷೇತ್ರಕ್ಕೆ ಬಹಳ ವಿಶೇಷವಾದಂಥ ಪ್ರೋತ್ಸಾಹವನ್ನು, ಬೆಂಬಲವನ್ನು ಕೊಟ್ಟಿದ್ದಾರೆ. ' ನಮ್ಮ ಮಕ್ಕಳೇ ನಮ್ಮ ಭವಿಷ್ಯ' ಎನ್ನತಕ್ಕಂಥ ಬಹಳ ಒಳ್ಳೆಯ ಕಾರ್ಯಕ್ರಮದ ಜೊತೆಗೆ 'ಅಕ್ಷರ ದಾಸೋಹ ಕಾರ್ಯಕ್ರಮ' ಬಹುಶಃ ಅಕ್ಷರ ದಾಸೋಹ ಕಾರ್ಯಕ್ರಮವನ್ನು ಈ ರಾಜ್ಯದಲ್ಲಿ ಅನುಷ್ಠಾನ ಮಾಡಿದಂಥ ಸಂದರ್ಭದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಿಂದ ಬೇರೆ ಬೇರೆ ರೀತಿ ಪ್ರತಿಕೂಲವಾದಂಥ ವಿಚಾರಗಳನ್ನು ನಾವು ಕೇಳುತ್ತಿದ್ದೆವು. ಬಹುಶಃ ಇವತ್ತು ಕರ್ನಾಟಕ ರಾಜ್ಯದ ಮೂಲೆ ಮೂಲೆಗಳಲ್ಲಿರತಕ್ಕಂಥ ಎಲ್ಲಾ ಶಾಲೆಗಳಿಗೆ ಆ ಮಕ್ಕಳನ್ನು ಕಳುಹಿಸತಕ್ಕಂಥ ಹೆತ್ತವರು ಬಹಳ ಅಭಿಮಾನದಿಂದ ಈ ಒಂದು ಕಾರ್ಯಕ್ರಮವನ್ನು ಇವತ್ತು ಸ್ವೀಕಾರ ಮಾಡಿದ್ದಾರೆ. ಇಡೀ ರಾಜ್ಯದ ಜನ ಇದನ್ನು ಅಭಿನಂದಿಸತಕ್ಕಂಥ ಹಂತಕ್ಕೆ ಸಹ ಈ ಕಾರ್ಯಕ್ರಮ ಮುಟ್ಟಿದೆ. ಬಹುಶಃ ಬಡವರ್ಗದ ಮಕ್ಕಳು, ಬಹಳ ದುರ್ಬಲವರ್ಗದ ಮಕ್ಕಳು ಕಷ್ಟದಲ್ಲಿದ್ದು ಊಟಕ್ಕೂ ಕಷ್ಟದಲ್ಲಿರತಕ್ಕಂಥ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟ ಕೊಡತಕ್ಕಂಥ ಕಾರ್ಯಕ್ರಮ ಶಿಕ್ಷಣದ ಗುಣಮಟ್ಟವನ್ನು ಇನ್ನಷ್ಟು ಎತ್ತರಿಸಲಿಕ್ಕೆ ಇದು ಕಾರಣವಾಗಿದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಸನ್ಮಾನ್ಯ ಮುಖ್ಯಮಂತ್ರಿಗಳು ಇದನ್ನು ಮುಂದಿನ ಆಯವ್ಯಯದಲ್ಲಿ 7ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೂ ಈ ಕಾರ್ಯಕ್ರಮವನ್ನು ವಿಸ್ತರಿಸುವಂಥದ್ದು ಬಹಳ ಅಭಿನಂದನೀಯ ಮತ್ತು

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಸುರಸ್ಕರಿಸಿಲ್ಲವೆಂದು ಸೂಚಿಸುತ್ತದೆ)

ಬಹಳ ಸ್ವಾಗತಾರ್ಹವಾದಂಥ ಕಾರ್ಯಕ್ರಮ. ಇದರಿಂದ ಬಹುಶಃ ಶಿಕ್ಷಣ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲಿಕ್ಕೆ ಸಾಧ್ಯವಾಗುತ್ತದೆ ಎನ್ನುವಂಥದ್ದು ನನ್ನ ಅನಿಸಿಕೆ. ಜೊತೆಗೆ ಮಹಿಳಾ ಸಬಲೀಕರಣ ವಿಚಾರದಲ್ಲಿ ಈಗಾಗಲೇ ಸಾಕಷ್ಟು ನಮ್ಮ ಸದಸ್ಯರು ಮಾತನಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಇವತ್ತು ಮಹಿಳೆಯರು ಈ ರಾಷ್ಟ್ರದ ಮುಖ್ಯ ವಾಹಿನಿಯಲ್ಲಿ ಅತ್ಯಂತ ಮೊಡ್ಡದಾದಂಥ ದಾಪುಗಾಲನ್ನು ಹಾಕಿಕೊಂಡು ಮುಂದೆ ನಡೆಯತಕ್ಕಂಥ ವಿಚಾರಗಳನ್ನು ನಾವು ಇವತ್ತು ನೋಡುತ್ತಿದ್ದೇವೆ. ಸಮಾಜದಲ್ಲಿ ಪುರುಷ ಪ್ರಧಾನ ಸಮಾಜ ಎನ್ನತಕ್ಕಂಥ ಅನೇಕ ಮಾತುಗಳನ್ನು ಕೇಳುತ್ತೇವೆ. ಏನಿದ್ದರೂ ಕೂಡ ಮಹಿಳೆ ಪುರುಷರಿಗೆ ಸರಿಸಮಾನವಾಗಿ ಮುಂದೆ ಹೋಗದೇ ಇದ್ದರೆ ಈ ರಾಷ್ಟ್ರದ ಸಮಾಜದ ಸಮುದಾಯದ ಅಭಿವೃದ್ಧಿಯನ್ನು ನಾವು ನಿರೀಕ್ಷೆ ಮಾಡಲಿಕ್ಕೆ ಸಾಧ್ಯವಿಲ್ಲ. ಆ ನಿಟ್ಟಿನಲ್ಲಿ ಇದೊಂದು ಕ್ರಾಂತಿಕಾರಕವಾದಂಥ ಬದಲಾವಣೆಯನ್ನು ನಮ್ಮ ರಾಜ್ಯದಲ್ಲಿ ಮಾಡಿದ್ದೇವೆಂಬುದನ್ನು ಒಪ್ಪಲೇಬೇಕಾಗುತ್ತದೆ.

†ಛೇರ್ಮನ್ : ಶ್ರೀ ಭಂಡಾರಿಯವರೇ, ನೀವು ಚರ್ಚೆಯನ್ನು ನಾಳೆ ಮುಂದುವರೆಸಿ. ಈಗ ಸದನವನ್ನು ನಾಳೆ ಬೆಳಿಗ್ಗೆ 10-30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 5 ಗಂಟೆ 46 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 11ನೇ ಫೆಬ್ರವರಿ)

(2004ರ ಬುಧವಾರದಂದು ಬೆಳಿಗ್ಗೆ 10 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಮತ್ತು ಭಾಷಣವನ್ನು ಪರಿಶೀಲಿಸಿಲ್ಲವೆಂದು ಸೂಚಿಸುತ್ತದೆ)